# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:195 • ನೋಂದಣಿ ನಂ.:KARKAN27911 • ವಿಜಯನಗರ • 28.12.2023 • ಗುರುವಾರ • ಪುಟ:04 • ಬೆಲೆ:2

Volume:01 • Issue:195 • Reg.No:KARKAN27911 • VIJAYANAGARA • 28.12.2023 • Thursday • Page:04 • Rs:2











## ಹೊಲ, ಗೋಡನ್ ಬಾಡಿಗೆಗೆ/ಲೀಸ್‌ಗೆ ಲಭ್ಯ

ಹೊಸಪೇಟೆ ತಾಲೂಕಿನ ನಾಗೇನಹಳ್ಳಿಯಲ್ಲಿ ಬೋರ್‌ವೆಲ್ ನೀರು ಸಹಿತ 2 ಎಕರೆ ಹೊಲ ಮತ್ತು 25X60 ಚ.ಅಡಿ. 15 ಅಡಿ ಎತ್ತರ ಇರುವ ಗೋಡನ್ ಬಾಡಿಗೆ / ಲೀಸ್ ಕೊಡಲಾಗುವುದು. ಆಸಕ್ತರು ಸಂಪರ್ಕಿಸಿ.

9448493553





# ಹಂಪಿ ಶ್ರೀ ವಿರೂಪಾಕ್ಷ ಹಾಗೂ ಪಂಪಾಂಬಿಕೆ ಮದುವೆ ನಿಶ್ಚಿತಾರ್ಥದ ಫಲಪೂಜೆ ಇಂದು

**ಪಂಪಾ ವಿರೂಪಾಕ್ಷೇಶ್ವರ ಫಲಪೂಜಾ ಮಹೋತ್ಸವ ತಿಳಿಯೋಣ ಬನ್ನಿ । ಹಂಪಿಯಲ್ಲಿ ಪಂಪಾಂಬಿಕೆ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ ಶಿವ**


■ ಎಂ.ಎಂ.ಶಿವಪ್ರಕಾಶ

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಪರಂಪರೆಯ ನೆಲ. ಪಂಪ ಕ್ಷೇತ್ರ, ಪಂಪಾಪುರ ಎಂದು ಕರೆಯಲಾಗಿದೆ. ಇದು ರಾಮಾಯಣ ಕಾಲದ ಕಿಷ್ಕಿಂದೆ. ಶ್ರೀರಾಮ ಲಕ್ಷ್ಮಣರು ಪಂಪ ಸರೋವರದಲ್ಲಿ ಸ್ನಾನ ಮಾಡಿ ಪೂಜಿಸಿ, ಸೀತಾನ್ವೇಷಣೆ ಇಲ್ಲಿಂದಲೇ ಪ್ರಾರಂಭ ಎನ್ನುತ್ತದೆ ಪೌರಾಣಿಕ ಕಥೆ. ಪಂಪ ಕ್ಷೇತ್ರವು ಕಾಶಿ ಕ್ಷೇತ್ರಕ್ಕೆ ಸಮಾನವಾಗಿದ್ದು ಕಾಶಿ ವಿಶ್ವೇಶ್ವರನೇ ಪಂಪ ವಿರೂಪಾಕ್ಷನೆಂದು ತುಂಗಭದ್ರಯೇ ಜಾಹ್ನವಿ ಅಥವಾ ಗಂಗಾ ನದಿಗೆ ಸಮಾನವೆಂದು ಸಪ್ತ ಋಷಿಗಳಿಂದ ಹೊಗಳಿಸಿಕೊಂಡ ಸ್ಥಳ. ಪ್ರಾಕೃತಿಕ ಸೌಂದರ್ಯ ಮತ್ತು ಐತಿಹಾಸಿಕ ಪರಂಪರೆಯನ್ನು ಹೊಂದಿರುವ ಸ್ಥಳ. ನಿಸರ್ಗ ನಿರ್ಮಿತ ಬೆಟ್ಟ ಗುಡ್ಡಗಳ ಮಧ್ಯೆ ಸದಾ ಹರಿಯುವ ತುಂಗಭದ್ರೆಯ ಮಡಿಲಲ್ಲಿ ಈ ಪಂಪ ಕ್ಷೇತ್ರ ಇದೆ. ವಿಜಯನಗರ ಪೂರ್ವ ವಿಜಯನಗರ ಸಾಮ್ರಾಜ್ಯ ಹಾಗೂ ವಿಜಯನಗರದ ನಂತರ ಹಂಪಿ ತನ್ನ ಧಾರ್ಮಿಕ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಕನ್ನಡ ಸಾಮ್ರಾಜ್ಯವಾಗಿ ವಿಶ್ವದ ಗಮನವನ್ನು ಸೆಳೆದಿದ್ದ ವಿಜಯನಗರ ಸಾಮ್ರಾಜ್ಯವು, ತನ್ನ ವೈಭವ ಪೇತ ಆಡಳಿತದಿಂದ ಪ್ರಸಿದ್ಧಿ ಪಡೆದಿತ್ತು. ಈಗ ವಾಸ್ತವದಲ್ಲಿ ವಿಶ್ವ ಪರಂಪರೆ ತಾಣವಾಗಿ ಪ್ರವಾಸಿ ಕೇಂದ್ರವಾಗಿ ಗಮನ ಸೆಳೆಯುತ್ತದೆ ಈ ಧಾರ್ಮಿಕ ಸಾಂಸ್ಕೃತಿಕ ಚಾರಿತ್ರಿಕ ನೆಲದಲ್ಲಿ ಇವತ್ತು ಅಂದರೆ 28ರಂದು ಫಲಪೂಜಾ ಮಹೋತ್ಸವ ನಡೆಯುತ್ತಿದೆ. ಈ ಕುರಿತ ಒಂದಿಷ್ಟು ಮಾಹಿತಿ ನಿಮಗಾಗಿ.

ಪೌರಾಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ನಡೆದು ಬಂದಿರುವ ಕನ್ನಡ ನಾಡಿನ ಅತಿ ಪ್ರಾಚೀನ ಧಾರ್ಮಿಕ ಪರಂಪರೆಯ ಕ್ಷೇತ್ರಗಳಲ್ಲಿ ಹಂಪಿ ಪ್ರಮುಖವಾದ ಸ್ಥಳವಾಗಿದೆ. ಪಾರ್ವತಿ ಮತ್ತು ಶಿವನನ್ನು, ಪಂಪಾಂಬಿಕೆ ಮತ್ತು ವಿರೂಪಾಕ್ಷ ರೆಂದು ಜನಸಾಮಾನ್ಯರು ಕರೆದು-ಕೊಂಡು ಬಂದಿದ್ದಾರೆ. ಪಾರ್ವತಿಯನ್ನು ಪಂಪಾಂಬಿಕೆ, ಹಂಪಮ್ಮ ಎಂತಲೂ ಶಿವನನ್ನು ವಿರೂಪಾಕ್ಷ, ಪಂಪಾಪತಿ, ಪಂಪಣ್ಣ ಮೊದಲಾದ ಹೆಸರುಗಳಿಂದಲೂ ಜನಪದರು ಕರೆಯುತ್ತಿದ್ದಾರೆ. ಪಂಪಾ-ವಿರೂಪಾಕ್ಷರನ್ನೇ ಕೇಂದ್ರವಾಗಿ ಹಂಪಿಯ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಗಳು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿವೆ. ವಿರೂಪಾಕ್ಷನಿಗೆ ಸಂಬಂಧಿಸಿದಂತೆ ಫಲಪೂಜಾ ಮತ್ತು ಜಾತ್ರಾ ಮಹೋತ್ಸವ ಎರಡು ಹಂತಗಳಲ್ಲಿ ನಡೆಯುತ್ತವೆ. ಫಲ ಪೂಜೆಯು ಪ್ರತಿವರ್ಷ ಡಿಶಂಬರ್ ತಿಂಗಳಲ್ಲಿ ಮೂರು ಅಥವಾ ಕೊನೆಯ ವಾರದಂದು ಹಂಪಿಯ ಕೋದಂಡರಾಮ ದೇವಸ್ಥಾನದ ಬಳಿ ನಡೆ-ಯುತ್ತದೆ. ವಿರೂಪಾಕ್ಷನ ರಥೋತ್ಸವ ಅಥವಾ ಜಾತ್ರೆ ಏಪ್ರಿಲ್ ತಿಂಗಳಲ್ಲಿ ಹಂಪಿ ಹುಣ್ಣಿಮೆಯಂದು ನಡೆಯುತ್ತದೆ.





**ಫಲಪೂಜೆ:** ಪಂಪಾಪುರದ ಅರಸ ಶ್ರೀ ವಿರೂಪಾಕ್ಷ ಹಾಗೂ ಪಂಪಾಂಬಿಕೆಯರ ಮದುವೆಯ ನಿಶ್ಚಿತಾರ್ಥದ ಆಚರಣೆ ಫಲಪೂಜೆ ಆಗಿದೆ. ಈ ಫಲ ಪೂಜೆ ಆಚರಣೆಗೆ ಪೌರಾಣಿಕ ಕಥೆಗಳಿವೆ. ಬ್ರಹ್ಮನ ಮಾನಸ ಪುತ್ರಿ ಯಾದ ಪಂಪಾಂಬಿಕೆ ಶಿವನಲ್ಲಿ ಅನುರಕ್ತಳಾಗಿ ಅವನನ್ನು ವರಿಸಲು ನಿರ್ಧರಿಸುತ್ತಾಳೆ. ಆಗ ಹಂಪಿಯಲ್ಲಿ ತಪಸ್ಸನ್ನು ಮಾಡುತ್ತಾಳೆ. ಅವಳ ತಪಸ್ಸಿಗೆ ಮೆಚ್ಚಿದ ಶಿವ ಪ್ರತ್ಯಕ್ಷನಾಗಿ ಅವಳನ್ನು ವರಿಸಿದ. ಹೀಗಾಗಿ ಪಂಪಾಂಬಿಕೆಯಿಂದ ಪಂಪ ವಿರೂಪಾಕ್ಷನಾದ ಎಂಬ ಅಭಿಪ್ರಾಯವಿದೆ. ಮತ್ತೊಂದು ಕಥೆಯ ಪ್ರಕಾರ ದಕ್ಷನ ಯಜ್ಞ ಕುಂಡದಲ್ಲಿ ಬಿದ್ದು ಸತ್ತ ದಾಕ್ಷಾಯಿಣಿಯ ಪರ್ವತ ರಾಜನ ಮಗಳಾಗಿ ಹುಟ್ಟುತ್ತಾಳೆ. ಆಕೆ ಪ್ರಾಪ್ತವಯಸ್ಕಳಾದಾಗ ಶಿವ ಆಕೆಯನ್ನು ಕೇಳಲು ಹೋಗುತ್ತಾನೆ. ಪುರಾಣದ ಈ ಭಾಗವೇ ಫಲಪೂಜೆಯಲ್ಲಿ ಪುನರ್ ಸೃಷ್ಟಿ ಯಾಗಿದೆ. ಗಂಡನ ಕಡೆಯವರು ಹೆಣ್ಣು ಕೇಳಲು ಹೋಗುವಾಗ ಏನೇನು ಆಚರಣೆಗಳು ಮಾಡುತ್ತಾರೊ, ಅವುಗಳೆಲ್ಲವೂ ಫಲ ಪೂಜೆಯಲ್ಲಿ ಮಾಡುತ್ತಾರೆ. ಮೊದಲು ಶುಭ ದಿನವನ್ನು ನಿಗದಿಪಡಿಸಲಾಗುತ್ತದೆ. ಆ ದಿನದಂದು ಪಂಪಾಪತಿಯನ್ನು ಸ್ನಾನ ಮಾಡಿಸಿ ಅವನಿಗೆ ಹೊಸ ಬಟ್ಟೆಗಳನ್ನು ತೊಡಿಸಿ ದೇವಸ್ಥಾನದಿಂದ ಮೆರವಣಿಗೆಯಲ್ಲಿ ಹಂಪಿ ಹೊಳೆಯ ದಂಡೆಯಲ್ಲಿರುವ ಕೋದಂಡರಾಮ ದೇವಸ್ಥಾನದ ಅಂಗಳಕ್ಕೆ ಕರೆದುಕೊಂಡು ಬರುತ್ತಾರೆ. ಈ ಸಂದರ್ಭದಲ್ಲಿ ಪಂಪಾಪತಿಯ ಪರವಾಗಿ ಐದು ಜನ ಪೂಜಾರಿಗಳು ಇರುತ್ತಾರೆ. ಪಂಪಾಂಬಿಕೆ ಪರವಾಗಿ ಐದು ಜನ ಪೂಜಾರಿಗಳು ಇರುತ್ತಾರೆ. ದೇವಸ್ಥಾನದ ಅಂಗಳದಲ್ಲಿ ಎರಡು ಕಡೆಯವರು ಮುಖಾಮುಖಿಯಾಗಿ ಕುಳಿತು ನಿಶ್ಚಿತಾರ್ಥ ಕಾರ್ಯವನ್ನು ನೆರವೇರಿಸುತ್ತಾರೆ.

ಗಂಡಿನ ಕಡೆಯವರು ಹೆಣ್ಣಿನ ಕಡೆಯವರನ್ನು ಈ ರೀತಿ ಕೇಳುತ್ತಾರೆ, ನಮ್ಮ ಪಂಪಾವಿರೂಪಾಕ್ಷ ಮುಕ್ಕಣ್ಣನಿಗೆ ನಿಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿ ಅಂತ ಕೇಳುತ್ತಾ ಇದ್ದೇವೆ, ನಮ್ಮ ವಿರೂಪಾಕ್ಷ ನಿಮ್ಮ ಮಗಳನ್ನು ಒಪ್ಪಿಕೊಂಡಿದ್ದಾನೆ ಅದಕ್ಕೆ ನಿಮ್ಮ ಒಪ್ಪಿಗೆ ಏನು ಎಂದು ಕೇಳುತ್ತಾರೆ. ಆಗ ಹೆಣ್ಣಿನ ಕಡೆಯವರು ಹೋಗ್ರಿ ಸ್ವಾಮಿ ನಿಮ್ಮ ವಿರುಪಾಕ್ಷನಿಗೆ ಮಲ್ಕೊಳಕ್ ಮನೆ ಇಲ್ಲ ಏನು ಇಲ್ಲದ ವರನಿಗೆ ನಮ್ಮ ಹಂಪಮ್ಮನ ಕೊಟ್ಟು ಹೇಗೆ ಮದುವೆ ಮಾಡುವುದು ಎಂದು ಪ್ರಶ್ನಿಸುತ್ತಾರೆ.ಆಗ ಹೆಣ್ಣಿನ ಕಡೆಯವರು ನೋಡಮ್ಮ ಹಂಪಮ್ಮ, ವಿರೂಪಾಕ್ಷ ಬಹಳ ಶ್ರೀಮಂತನಂತೆ, ಬೆಳ್ಳಿ ಬಸವ, ಬಂಗಾರ ಕಟ್ಟಿ ಹೇಮಕೂಟ ಕೊಡುತ್ತಾರಂತೆ. ನಿನ್ನ ಅಭಿಪ್ರಾಯ ಏನಮ್ಮಾ ಎಂದು ಕೇಳುತ್ತಾರೆ. ಹೀಗೆ ಸುಮಾರು ಮಧ್ಯರಾತ್ರಿಯವರೆಗೂ ಈ ಚರ್ಚೆ ನಡೆದು ಕೊನೆಗೆ ಹಂಪಮ್ಮನನ್ನು ಕೊಡಲು ನಿರ್ಧರಿಸುತ್ತಾರೆ. ಇದನ್ನು ಅಲ್ಲಿ ಸೇರಿದ ಸಾವಿರಾರು ಜನರಿಗೆ ಹೇಳುತ್ತಾರೆ. ಹೀಗೆ ಪಂಪಾ ವಿರೂಪಾಕ್ಷರ ನಿಶ್ಚಿತಾರ್ಥವಾಗುತ್ತದೆ. ಆಗ ಜನರು ದೇವರ ಮುಯ್ಯಕೊಡುತ್ತಾರೆ ನಂತರ ಎಲ್ಲರೂ ವಿರೂಪಾಕ್ಷನೊಂದಿಗೆ ದೇವಸ್ಥಾನಕ್ಕೆ ಮರಳಿ ಬರುತ್ತಾರೆ ಇದು ಫಲಪೂಜಾ ಸಂದರ್ಭದಲ್ಲಿ ನಡೆದುಕೊಂಡು ಬಂದ ಪರಂಪರೆಯಾಗಿದೆ. ಹೀಗೆ ನಿಶ್ಚಿತಾರ್ಥವಾದ ಪಂಪಾ ವಿರೂಪಾಕ್ಷ ಮದುವೆಯನ್ನು ರಥೋತ್ಸವದ ಸಂದರ್ಭದಲ್ಲಿ ನಡೆಯುತ್ತದೆ. ಈ ಫಲಪೂಜೆಗೆ ಸಾವಿರಾರು ಜನರು ಇಡೀ ರಾತ್ರಿ ನಡುಗು ಹುಟ್ಟಿಸುವ ಚಳಿಯಲ್ಲಿ ಪಾಲ್ಗೊಂಡು ತಮ್ಮ ಭಕ್ತಿಯನ್ನು ತೋರಿಸಿ ಪಂಪಾ ವಿರುಪಾಕ್ಷನ ನಿಶ್ಚಿತಾರ್ಥಕ್ಕೆ ಸಾಕ್ಷಿಯಾಗುತ್ತಾರೆ.

**ಮೈಕ್ರೋ ನ್ಯೂಸ್**

## ತಾಲ್ಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆ ಡಿ.28ಕ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**

2023-24ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬರಪೀಡಿತ ತಾಲ್ಲೂಕಿನ ಹಿನ್ನೆಲೆಯಲ್ಲಿ ಹೊಸಪೇಟೆ ತಾಲ್ಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆಯನ್ನು ಡಿ.28ರಂದು ಬೆಳಿಗ್ಗೆ 11 ಗಂಟೆಗೆ ತಾಲ್ಲೂಕು ಪಂಚಾಯತ್ ಕಚೇರಿಯ ವಿದ್ಯಾರಣ್ಯ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಶಾಸಕ ಹೆಚ್.ಆರ್.ಗವಿಯಪ್ಪ ಅಧ್ಯಕ್ಷತೆ ವಹಿಸುವರು. ಅಗತ್ಯ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಯಾವುದೇ ಪ್ರತಿನಿಧಿಯನ್ನು ನಿಯೋಜಿಸದೇ ತಪ್ಪದೇ ಖುದ್ದಾಗಿ ಹಾಜರಾಗಬೇಕೆಂದು ತಹಶೀಲ್ದಾರ್ ವಿಶ್ವಜಿತ್ ಮೆಹ್ತಾ ತಿಳಿಸಿದ್ದಾರೆ.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ, ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ
> । ಡಿ.ವಿ.ಜಿ.

## ಅಯ್ಯಪ್ಪಸ್ವಾಮಿ ರಥೋತ್ಸವ



ಹೊಸಪೇಟೆ ನೆಹರೂ ಕಾಲೋನಿಯಲ್ಲಿರುವ ಶ್ರೀ ಅಯ್ಯಪ್ಪಸ್ವಾಮಿಯ ಉತ್ಸವ ಮೂರ್ತಿಯೊಂದಿಗೆ ನಗರದಲ್ಲಿ ಬುಧವಾರ ರಥೋತ್ಸವ ಜರುಗಿತು..

## ಸಚಿವ ಶಿವಾನಂದ ಪಾಟೀಲ್ ವಿರುದ್ಧ ಬಾರುಕೋಲು ಬೀಸಿದ ರೈತರು

**ರೈತರ ಅಪಮಾನ ಮಾಡಿದವರನ್ನು ಮಂತ್ರಿ ಸ್ಥಾನದಿಂದ ಕಿತ್ತೊಗೆಯಿರಿ । ರೈತ ಮುಖಂಡರ ಆಗ್ರಹ**

■ ಹಂಪಿ ಟೈಮ್ಸ್ ಹೊಸಪೇಟೆ:

ರೈತರ ಬಗ್ಗೆ ಹಗುರವಾಗಿ ಮಾತನಾಡಿರುವ ಸಚಿವ ಶಿವಾನಂದ ಪಾಟೀಲರನ್ನು ಕೂಡಲೇ ಸಚಿವ ಸ್ಥಾನದಿಂದ ವಜಾಮಾಡಬೇಕು. ಬಹಿರಂಗವಾಗಿ ರೈತರ ಕ್ಷಮೆ ಕೋರಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಯುಕ್ತ ಹೋರಾಟ ಸಮಿತಿ ರೈತ ಮುಖಂಡರು ಬುಧವಾರ ನಗರದಲ್ಲಿ ಬಾರುಕೋಲು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಅಂಬೇಡ್ಕರ್ ವೃತ್ತದಲ್ಲಿ ರೈತರು ಮುಖಂಡ ಖಾಜಾಹುಸೇನ್ ನಿಯಾಜಿ ಮಾತನಾಡಿ, ಅನೇಕ ಸಂಕಷ್ಟಗಳ ನಡುವೆಯೂ ರೈತ ದೇಶಕ್ಕೆ ಅನ್ನ ಕೊಡುವ ಕಾಯಕದಲ್ಲಿ ತೊಡಗಿದ್ದಾನೆ. ರೈತರು ಬೆಳೆ ಬೆಳೆದರೆ ದೇಶಕ್ಕೆ ಅನ್ನ ಎಂಬುದನ್ನು ಸಚಿವರು ಮರೆತಿದ್ದಾರೆ. ನಿತ್ಯ ಅನ್ನ ಉಣ್ಣುವ ಮುನ್ನ ರೈತನ ನೆನೆದು ಉಣ್ಣುವ ಕಾಲದಲ್ಲಿ ಅವಮಾನ ಮಾಡಿರುವುದು ಅಕ್ಷಮ್ಯ. ಕೂಡಲೇ ಅವರ ವಿರುದ್ಧ ಸರ್ಕಾರ ಸೂಕ್ತ ಕ್ರಮಕೈಗೊಳ್ಳಬೇಕು. ರೈತರ ಸಾಲ ಮನ್ನಾ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.



ಸಚಿವರ ಭಾವಚಿತ್ರಕ್ಕೆ ಮಸೀ ಬಳಿದು ಆಕ್ರೋಶ ವ್ಯಕ್ತಪಡಿಸಿದರು. ಜಡೆಯಪ್ಪ, ವೆಂಕಟೇಶ್ವ, ಪರಶುರಾಮಪ್ಪ ಸಿದ್ಧಪ್ಪ, ಅಂಕಲೇಶ, ಜಾಹಿರುದ್ದೀನ್, ನಾಗರಾಜ ಇತರರು ಪಾಲ್ಗೊಂಡಿದ್ದರು.




## ವಚನ ಅರಿವು

### ಸಮಾನತೆ

**ಮೊಲೆ ಮುಡಿ ಬಂದಡೆ ಹೆಣ್ಣೆಂಬರು**
**ಮೀಸೆ ಕಾಸೆ ಬಂದಡೆ ಗಂಡೆಂಬರು**
**ಈ ಉಭಯದ ಜ್ಞಾನ,**
**ಹೆಣ್ಣೊ ಗಂಡೊ ನಾಸ್ತಿನಾಥಾ?**

**– ಗೊಗ್ಗವ್ವೆ**

ಅನಾದಿಕಾಲದಿಂದಲೂ ಹೆಣ್ಣನ್ನು ಕೆಳದರ್ಜೆಯ ಪ್ರಜೆಯಾಗಿಯೇ ನೋಡಲಾಗುತ್ತಿತ್ತು. ಇವಳಿಗೆ ಜ್ಞಾನವಿರುವುದಿಲ್ಲ, ಸ್ವತಂತ್ರ್ಯ ವಿಚಾರ, ಆಲೋಚನೆ ಮಾಡುವ ಶಕ್ತಿ ಇವಳಿಗೆ ಇಲ್ಲ. ಕೇವಲ ಪುರುಷನ ಅಧೀನಳಾಗಿ ದುಡಿಯಬೇಕು ಎಂಬ ಭಾವನೆಯನ್ನು ತುಂಬಿ ಹೆಣ್ಣನ್ನು ಅಶಕ್ತಳನ್ನಾಗಿಸುವ ಹುನ್ನಾರ ವ್ಯವಸ್ಥಿತವಾಗಿ ನಡೆದಿತ್ತು. ಶರಣರ ಚಳುವಳಿ ಈ ವ್ಯವಸ್ಥೆಯನ್ನು ಪ್ರಶ್ನಿಸಿತು. ಹೆಣ್ಣು ಗಂಡಿನಷ್ಟೆ ಸರಿಸಮಾನಳು. ಅವಳಿಗೂ ಆತ್ಮವಿರುತ್ತದೆ. ಜ್ಞಾನ ಪಡೆಯಲು, ಹಂಚಲು ಯೋಗ್ಯಳು ಎಂಬುದನ್ನು ತಿಳಿಸಿದರು. ಅನೇಕ ಮಹಿಳೆಯರು ವ್ಯವಸ್ಥೆಯ ವಿರುದ್ಧ ಧ್ವನಿಯೆತ್ತಿ ಶರಣೆಯರಾಗಿ ಸಾಧನೆ ಮಾಡಿದರು. ಅವರಲ್ಲಿ ಗೊಗ್ಗವ್ವೆಯು ಶರಣೆಯಾಗಿ ವಚನಗಳನ್ನು ರಚಿಸಿದ್ದಾಳೆ.

ಹೆಣ್ಣು ಕನಿಷ್ಠ, ಗಂಡು ಶ್ರೇಷ್ಠ ಎಂಬ ಭಾವನೆಯನ್ನು ಬಿಟ್ಟು ಇಬ್ಬರಲ್ಲೂ ಇರುವ ಜ್ಞಾನ ಒಂದೆ. ಜ್ಞಾನಕ್ಕೆ, ಅರಿವಿಗೆ ಹೆಣ್ಣು-ಗಂಡು ಎಂಬ ಭೇದವಿಲ್ಲ. ಪ್ರಕೃತಿ ಮಾಡಿದ ವಿಶೇಷತೆಯೆ ಜೈವಿಕ ಭಿನ್ನತೆ. ಹೆಣ್ಣಿಗೆ ಮೊಲೆ, ಮುಡಿ. ಗಂಡಿಗೆ ಮೀಸೆ, ಕಾಸೆ ಅಷ್ಟೆ. ಇಬ್ಬರು ಸಮಾನರು. ಇಬ್ಬರಿಗೂ ಸಮಾಜದಲ್ಲಿ ಸಮಾನ ಪ್ರಾತಿನಿಧಿತ್ವ ದೊರಕಬೇಕು.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ರಾಂಪುರ ದುರ್ಗಾದೇವಿ ಕಾರ್ತಿಕೋತ್ಸವ





**ಮರಿಯಮ್ಮನಹಳ್ಳಿ:** ಪಟ್ಟಣದ ಅಧಿದೇವತೆ ರಾಂಪುರ ದುರ್ಗಾದೇವಿ ಕಾರ್ತಿಕೋತ್ಸವ ಮಂಗಳವಾರ ನಡೆಯಿತು. ನಿಮಿತ್ತವಾಗಿ ದೇವಿಗೆ ವಿಶೇಷ ಅಭಿಷೇಕ, ಅಲಂಕಾರ ಹಾಗು ವಿವಿಧ ಧಾರ್ಮಿಕ ವಿಧಿ-ವಿಧಾನಗಳು ನಡೆದವು. ಸಂಜೆ ಭಕ್ತರಿಂದ ದೀಪೋತ್ಸವ, ಭಜನೆಗಳು ಅಹೋರಾತ್ರಿ ನೆರವೇರಿದವು. ಕಟಿಗಿ ಯಲ್ಲಮ್ಮರ ಮಕ್ಕಳು ದೇವಿಯ ಮುತ್ತಿನಹಾರವನ್ನು 28ಸಾವಿರ. ರೂ.ಗಳಿಗೆ, ತುಂಬಿದ ಕಾಯಿಯನ್ನು 18 ಸಾವಿರ ರೂ. ಗಳಿಗೆ ಹರಾಜಿನಲ್ಲಿ ಪಡೆದು ಕೊಂಡರು.


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 9448633038

# ಅನಂತಮೂರ್ತಿ ಪತ್ರ





**ರಹಮತ್ ತರೀಕೆರೆ**
**ಸಂಸ್ಕೃತಿ ಚಿಂತಕರು**

ಕನ್ನಡ ವಿಶ್ವವಿದ್ಯಾಲಯದೊಂದಿಗೆ ಯು.ಆರ್. ಅನಂತಮೂರ್ತಿಯವರ ಸಂಬಂಧ ಹಲವು ತೆರನಾಗಿತ್ತು. ಅವರು ಇಲ್ಲಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತ, ತಮ್ಮ ಚಿಂತನೆಗಳನ್ನ ಹಂಚಿಕೊಳ್ಳುತ್ತಿದ್ದರು. ಅವರು ಎನ್‌ಬಿಟಿಯ ಅಧ್ಯಕ್ಷರಾದ ಬಳಿಕ, ಟಾಗೂರರ 'ಗೋರಾ' ಕಾದಂಬರಿಗೆ ಶತಮಾನ ತುಂಬಿತ್ತು. ಅದರ ಮೊದಲನೇ ಕಾರ್ಯಕ್ರಮವನ್ನು ಹಂಪಿಯಲ್ಲಿ ಏರ್ಪಡಿಸಿದರು. ಮುಂದೆ ಕನ್ನಡ ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣ ಮಾಡುವ ಅವಕಾಶ ಬಂದಾಗ (1998), ಕನ್ನಡದಲ್ಲಿ ಜ್ಞಾನಸೃಷ್ಟಿ ಮಾಡುವ ಕುರಿತು ಕೆಲವು ಪ್ರಮೇಯಗಳನ್ನು ಮಂಡಿಸಿದರು; ಕನ್ನಡ ವಿಶ್ವವಿದ್ಯಾಲಯವು 'ನಾಡೋಜ' ಗೌರವ ಪದವಿಯನ್ನು ಅವರಿಗೆ (2008) ನೀಡಿತು. ಕನ್ನಡ ವಿಶ್ವವಿದ್ಯಾಲಯ ಇಕ್ಕಟ್ಟಿಗೆ ಸಿಲುಕಿದಾಗ ಧಾವಿಸಿ ಬಂದು ನಮ್ಮ ಜತೆಗೆ ನಿಂತರು. ಅದು ಅವರು ನಾಡೋಜರಾಗಿ ತಮ್ಮ ರುಣ ತೀರಿಸಿದ ಪರಿಯಾಗಿತ್ತು.

ಈ ವಿದ್ಯಮಾನ ಸಂಭವಿಸಿದ್ದು 2010ನೇ ಇಸವಿಯಲ್ಲಿ. ಯಡಿಯೂರಪ್ಪನವರು ಮುಖ್ಯಮಂತ್ರಿಗಳೂ, ಅವರ ಮಂತ್ರಿಮಂಡಲದಲ್ಲಿ ಜನಾರ್ದನ ರೆಡ್ಡಿಯವರು ಪ್ರಭಾವಶಾಲಿ ಮಂತ್ರಿಗಳೂ ಆಗಿದ್ದ ಕಾಲವದು. ಆ ಹೊತ್ತಿಗೆ ವಿಜಯನಗರ ದೊರೆಯಾಗಿದ್ದ ಶ್ರೀಕೃಷ್ಣದೇವರಾಯನು ಪಟ್ಟಾಭಿಷೇಕದ 500ನೇ ವರ್ಷ ಪೂರೈಸಿತ್ತು. ಇದರ ಹಿನ್ನೆಲೆಯಲ್ಲಿ ಸರ್ಕಾರ ಅನೇಕ ಕಾರ್ಯಕ್ರಮ ಹಮ್ಮಿಕೊಂಡಿತು. ಅವುಗಳಲ್ಲಿ ವಿಶ್ವವಿದ್ಯಾಲಯದ 80 ಎಕರೆಯಷ್ಟು ಭೂಮಿಯನ್ನು 'ವಿಜಯನಗರ ಪುನಶ್ಚೇತನ ಟ್ರಸ್ಟಿ'ಗೆ ವರ್ಗಾಯಿಸಿ, ಅದರಲ್ಲಿ ಕೃಷ್ಣದೇವರಾಯ ಪುತ್ಥಳಿ ಸ್ಥಾಪಿಸಿ, ದೆಹಲಿಯ ಅಕ್ಷರಧಾಮದ ಗುಡಿಯ ಮಾದರಿಯಲ್ಲಿ ಥೀಮ್‌ಪಾರ್ಕನ್ನು ನಿರ್ಮಾಣ ಮಾಡುವುದೂ ಒಂದು. ಇದಕ್ಕಾಗಿ ಎಲ್. ಕೆ. ಅಡ್ವಾಣಿಯವರಿಂದ ಶಿಲಾನ್ಯಾಸವನ್ನು ನೆರವೇರಿಸಿತು. ಇದು ವಿಶ್ವವಿದ್ಯಾಲಯದ ನಮಗೆ ಒಪ್ಪಿತವಾಗಲಿಲ್ಲ. ಒಟ್ಟಿಗೆ ನಿಂತು ಪ್ರತಿರೋಧಿಸಿದೆವು. ಚಂದ್ರಶೇಖರ ಕಂಬಾರರು, ಎಂ.ಎಂ. ಕಲಬುರ್ಗಿಯವರು, ಎಚ್.ಜೆ.ಲಕ್ಕಪ್ಪಗೌಡರು, ವಿವೇಕರೈಯವರು ನಮ್ಮ ಬೆನ್ನಿಗೆ ನಿಂತರು. ಎಂ. ಚಿದಾನಂದಮೂರ್ತಿ ಅವರನ್ನು ಹೊರತುಪಡಿಸಿ, ಜಿ.ಎಸ್.ಶಿವರುದ್ರಪ್ಪ, ಚೆನ್ನವೀರ ಕಣವಿ, ಪಾಟೀಲ ಪುಟ್ಟಪ್ಪ, ಜಿ. ರಾಮಕೃಷ್ಣ, ಜಿ.ಕೆ.ಗೋವಿಂದರಾವ್, ಅಲ್ಲಮಪ್ರಭು ಬೆಟ್ಟದೂರು, ಕೆ. ಮರುಳಸಿದ್ಧಪ್ಪ, ಸಾರಾ ಅಬೂಬಕರ್, ನಾ. ಡಿಸೋಜಾ, ಪುರುಷೋತ್ತಮ ಬಿಳಿಮಲೆ, ನಲ್ಲೂರು ಪ್ರಸಾದ್, ಬರಗೂರು ರಾಮಚಂದ್ರಪ್ಪ, ಎಸ್. ಎಲ್.ಭೈರಪ್ಪ, ಕಡಿದಾಳು ಶಾಮಣ್ಣ, ಕುಂವೀ, ಕೆ.ವಿ.ನಾರಾಯಣ, ದೇವನೂರ ಮಹಾದೇವ, ಗಿರಡ್ಡಿ ಗೋವಿಂದರಾಜ, ಜಿ.ಎಸ್. ಆಮೂರ, ಡಿ.ದುರ್ಗಾದಾಸ, ಎಂ.ಡಿ. ಒಕ್ಕುಂದ, ವಾಮನ ಬೇಂದ್ರೆ, ವೀಣಾ ಶಾಂತೇಶ್ವರ, ಚಂಪಾ, ಗೀತಾ ನಾಗಭೂಷಣ, ಶೂದ್ರ ಶ್ರೀನಿವಾಸ್, ದಿನೇಶ್ ಅಮೀನಮಟ್ಟು ಮುಂತಾದ ನಾಡಿನ ಲೇಖಕರೂ ಚಿಂತಕರೂ ದನಿಗೂಡಿಸಿದರು. ನಾಡಿನ ಬಹುತೇಕ ಪತ್ರಿಕೆಗಳು ಸಂಪಾದಕೀಯ ಬರೆದು ಖಂಡಿಸಿದವು. 'ಪ್ರಜಾವಾಣಿ' ಪತ್ರಿಕೆ ನಿರ್ಣಾಯಕ ಪಾತ್ರ ವಹಿಸಿತು. ಎಪ್ಪತ್ತೈದರಷ್ಟು ಸ್ಥಳೀಯರ ಜನಪರ ಸಂಘಟನೆಗಳು ತಿಂಗಳು ಕಾಲ ಮುಷ್ಕರ ಮಾಡಿದವು. 187 ಜನರು ಬಂಧನಕ್ಕೆ ಒಳಗಾದರು. ಗೋಕಾಕ್ ಚಳುವಳಿ ಬಿಟ್ಟರೆ, ಕನ್ನಡಚಿಂತಕರು ಈ ಬಗೆಯಲ್ಲಿ ಒಗ್ಗಟ್ಟು ತೋರಿದ್ದು ಇದೇ ಸನ್ನಿವೇಶದಲ್ಲಿ ಎಂದು ಕಾಣುತ್ತದೆ. ಕರ್ನಾಟಕದ ಎಲ್ಲ ಕಡೆಯಿಂದ ಕನ್ನಡ ವಿಶ್ವವಿದ್ಯಾಲಯದ ಈ ಭೂಹೋರಾಟಕ್ಕೆ ಸಿಕ್ಕ ಬೆಂಬಲ ಮತ್ತು ಸಿಕ್ಕ ವಿಜಯವನ್ನು ನೆನೆದರೆ, ಹೃದಯ ತುಂಬಿಬರುತ್ತದೆ. ಹೋರಾಟದಲ್ಲಿ ಅನಂತಮೂರ್ತಿಯವರು ವಹಿಸಿದ ಪಾತ್ರ ಗಣನೀಯವಾಗಿತ್ತು. ಭೂಮಿ ಪರಭಾರೆಯಾದ ಕೂಡಲೇ ಅವರು ಬೆಂಗಳೂರಿನ ಟೌನ್‌ಹಾಲಿನಲ್ಲಿ ಲೇಖಕರು ಕಲಾವಿದರು ಕೂಡಿದ ಸಭೆಯಲ್ಲಿ ಸರ್ಕಾರದ ಕ್ರಮವನ್ನು ವಿರೋಧಿಸಿ ಧರಣಿ ಮಾಡಿದರು. ಭೂಹೋರಾಟ ನಡೆದ ಇಡೀ ತಿಂಗಳು ಕಾಲ ಅವರು ನಿರಂತರ ನಮ್ಮ ಸಂಪರ್ಕದಲ್ಲಿದ್ದರು. ಒಮ್ಮೆ ಉನ್ನತ ಶಿಕ್ಷಣಮಂತ್ರಿಗಳಾದ ಲಿಂಬಾವಳಿಯವರು, ಭೂಮಿ ಹಸ್ತಾಂತರ ವಿರೋಧಿಸುವ ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಹೇಳಿಕೆ ಮಾಡಿದರು. ಅದಕ್ಕೆ ಅನಂತಮೂರ್ತಿಯವರು ಕೂಡಲೆ ವಾಚಕರವಾಣಿಯಲ್ಲಿ (1.3.10) 'ಹಾಗೆ ಶಿಕ್ಷೆ ಮಾಡುವ ಅಧಿಕಾರ ಶಿಕ್ಷಣಮಂತ್ರಿಗಳಿಗಿಲ್ಲ; ಈ ಕೆಲಸವನ್ನು ಕುಲಪತಿ ಮತ್ತು ರಾಜ್ಯಪಾಲರು ಮಾತ್ರ ಮಾಡಬಹುದು. ವಿಶ್ವವಿದ್ಯಾಲಯದ ಅಧ್ಯಾಪಕ ಸಂಘದ ಅಧ್ಯಕ್ಷನಾಗಿದ್ದ ಮತ್ತು ವಿಶ್ವವಿದ್ಯಾಲಯವೊಂದರ ಕುಲಪತಿಯಾಗಿದ್ದ ಅನುಭವದಲ್ಲಿ ಈ ಮಾತನ್ನು ಬರೆದಿದ್ದೇನೆ. ಹಂಪಿ ವಿಶ್ವವಿದ್ಯಾಲಯದ ಅಧ್ಯಾಪಕರ ಹೋರಾಟಕ್ಕೆ ನನ್ನ ಬೆಂಬಲವಿದೆ. ಮಂತ್ರಿಗಳ ಮಾತಿಗೆ ಯಾರೂ ಹೆದರಬೇಕಿಲ್ಲ' ಎಂದು ಪತ್ರ ಬರೆದರು. ಈ ಪತ್ರ ಬರೆಯುವ ವಾರದ ಹಿಂದೆ 'ಕನ್ನಡದಿಂದ ಕಸಿದ ಜಾಗ ವಾಪಸ್ ಸಿಗಲಿ' ಎಂಬ ಬಹಿರಂಗ ಪತ್ರವನ್ನು ಕುಲಪತಿಗಳಿಗೆ (26.2.10 ಪ್ರಜಾವಾಣಿ) ಬರೆದಿದ್ದರು. ಅದೊಂದು ಚಾರಿತ್ರಿಕ ಮಹತ್ವದ ಪತ್ರವಾಗಿದ್ದು, ಅದರಲ್ಲಿ ಅವರು ತಮ್ಮ ಕನಸನ್ನು ಹಂಚಿಕೊಂಡರು. ಪತ್ರದ ಪಾಠ ಹೀಗಿದೆ:

"ಭಾಷೆಗಳ ಹೆಸರಿನಲ್ಲಿ ವಿಶ್ವವಿದ್ಯಾಲಯಗಳನ್ನು ಸೃಷ್ಟಿಸುವುದು ಸಮರ್ಪಕವಲ್ಲ. ತೆಲುಗು ವಿಶ್ವವಿದ್ಯಾಲಯ ನನಗೆ ಗೊತ್ತಿರುವಂತೆ ಅರ್ಹರನ್ನು ಹುಡುಕಿ ಪ್ರಶಸ್ತಿಗಳಿಗೆ ಆಯ್ಕೆ ಮಾಡುವ ಕೆಲಸಕ್ಕೆ ಸೀಮಿತವಾಗಿದೆ. ಕೇರಳದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಮಾಡಲು ಹೊರಟಾಗ ನಾನದನ್ನು ವಿರೋಧಿಸಿದ್ದೆ. ನಾನು ಊಹಿಸಿದಂತೆಯೇ ಅದು ಕಾರ್ಮಸ್ ಕಲಿಸಿ ಉದ್ಯೋಗ ಸೃಷ್ಟಿಸುವ ಅಂಗಡಿಯಾಯಿತು. ನೆವಕ್ಕೆ ಸಂಸ್ಕೃತ ಅಲ್ಲಿ ಇತ್ತು. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಮಾತ್ರ ಇದಕ್ಕೆ ಹೊರತಾಗಿತ್ತು. ಇದಕ್ಕೆ ಕಾರಣ ಕವಿ ಕಂಬಾರರು ಮೊದಲ ಕುಲಪತಿಯಾಗಿ ಆಯ್ಕೆಯಾದದ್ದು. ಆಗಿನ ಸರ್ಕಾರ ಅವರಿಗೆ ಬೆಂಬಲವಾಗಿ ನಿಂತದ್ದು. ಕಂಬಾರರು 'ರಿಸರ್ಚ್'ನ ಕಲ್ಪನೆಯನ್ನೇಬದಲಿಸಿ ಅದನ್ನು ದೇಸಿಗೊಳಿಸಿದರು.

ಈ ಕೆಲಸ ಮುಂದುವರೆಯಬೇಕಾದ್ದು. ಅದಕ್ಕೀಗ ವಿಘ್ನ ಒದಗಿದೆ. ಭೂತಕಾಲವನ್ನು ಪುನರುಜ್ಜೀವಿಸುವ ಆಶಯವಿಟ್ಟುಕೊಂಡಿದ್ದೇವೆಂದು ಹೇಳಿಕೊಳ್ಳುವ ಒಂದು ಟ್ರಸ್ಟಿಗೆ 80 ಎಕರೆ ಭೂಮಿಯನ್ನು ವರ್ಗಾಯಿಸಿದೆ. ಇದು ಅನೈತಿಕ ಮಾತ್ರವಲ್ಲ; ಅಸಿಂಧು ಕೂಡಾ. ವಿಶ್ವವಿದ್ಯಾಲಯದ ಹುಟ್ಟಿನ ಆಶಯಕ್ಕೇ ವಿರೋಧವಾದ್ದು. ಭೂತಕಾಲವನ್ನು ಪುನರುಜ್ಜೀವನಗೊಳಿಸುವುದು ಅಸಾಧ್ಯ ಮಾತ್ರವಲ್ಲ, ಅಸಾಧು ಕೂಡ. ಕೊನೆಗೆ ಭೂತಕಾಲ ಕೃಷ್ಣದೇವರಾಯನ ಕಂಚಿನ ಪ್ರತಿಮೆ ಮಾತ್ರವಾದೀತು. ರಾಜಕುಮಾರ್ ತಮ್ಮ ಸಿನಿಮಾದಲ್ಲಿ ಅದ್ಭುತವೆಂಬಂತೆ ಕೃಷ್ಣದೇವರಾಯ ಈ ಕಾಲಕ್ಕೆ ಒದಗುವಂತೆ ಮಾಡಿದರು. ನಮಗೆ ಅಷ್ಟು ಸಾಕು.

ಕೃಷ್ಣದೇವರಾಯನ ಸಿಂಹಾಸನದ 500 ವರ್ಷಗಳ ಆಚರಣೆಗೆ ಅದೆಷ್ಟು ಕೋಟಿಯೋ ಖರ್ಚಾಯಿತಂತೆ. ಕೃಷ್ಣದೇವರಾಯನ ಕಾಲದಲ್ಲೇ ಇಷ್ಟೊಂದು ಕೋಟಿ ಖರ್ಚಿನಲ್ಲಿ ಸಿಂಹಾಸನವನ್ನು ಅವನು ಹತ್ತಿದ್ದರೆ, ಖಂಡಿತ ಆ ಕಾಲದ ನಮ್ಮ ಪುರಂದರದಾಸರು ಕರೆದರೂ ಆ ಸಮಾರಂಭಕ್ಕೆ ಹೋಗುತ್ತಿರಲಿಲ್ಲ. ಅವರು ಹಾಡಿದ್ದಾರಲ್ಲವೇ 'ಉತ್ತಮ ಪ್ರಭುತ್ವ ಲೊಳಲೊಟ್ಟೆ'. ಪ್ರಭುತ್ವ ಉತ್ತಮವಾಗಿದ್ದರೂ ಲೊಳಲೊಟ್ಟೆ. ಉತ್ತಮವಾದೀತೆಂಬ ಭರವಸೆಯೂ ಲೊಳಲೊಟ್ಟೆ. ರಾಜಕೀಯದ ಬದಲಾವಣೆ ಹೃದಯದೊಳಗಿನ ಸಂಸ್ಕಾರವೂ ಆಗದ ಹೊರತು, ತೋರಿಕೆಗೆ ಇರುವ ವಿಜೃಂಭಣೆ ಲೊಳಲೊಟ್ಟೆ ಎನ್ನುವ ನಮ್ಮ ವಿಜಯನಗರ ವೈಭವದ ಕಾಲದ ದಾಸರಿಗೂ, ತನ್ನ ಕಾಲದ ಜರ್ಮನಿಯ ಪ್ರಭುತ್ವವೇ ಅಂತಿಮ ವೃದ್ಧಿಯ ಸ್ಥಿತಿ ಎಂದು ತಿಳಿದಿದ್ದ ಪಾಶ್ಚಾತ್ಯ ಹೆಗಲ್‌ಗೂ ಇರುವ ವ್ಯತ್ಯಾಸ ಗಮನಿಸಬೇಕು.

ಕನ್ನಡದಲ್ಲಿ ಜ್ಞಾನದ ಸಂವಹನೆ ಚೆನ್ನಾಗಿ ನಡೆದಿದೆ; ಈಗ ಜ್ಞಾನದ ಸೃಷ್ಟಿಯೂ ಕನ್ನಡದಲ್ಲಿ ನಡೆಯಬೇಕೆಂಬುದು ನಮ್ಮ ಆಶಯ. ಇಂಗ್ಲಿಷಿನಲ್ಲಿ ಹಲವರು ಜ್ಞಾನದ ಹೊಸ ಆವಿಷ್ಕಾರಗಳನ್ನು ಮಾಡಿದ್ದಾರೆ. ಡಾರ್ವಿನ್‌ನಂತಹವರು, ಡೇನಿಷ್‌ನಂತಹ ಪುಟ್ಟಭಾಷೆಯಲ್ಲಿ ಕೆರ್ಕೆಗಾರ್ಡ್‌ನಂಥವರು ಹೊಸ ತಿಳಿವನ್ನು ಹುಟ್ಟಿಸುವ ಕೆಲಸ ಮಾಡಿದ್ದಾರೆ. ಕನ್ನಡದಲ್ಲಿ ನಮ್ಮ ವಚನಕಾರರು, ಮುಖ್ಯವಾಗಿ ಬಸವ ಅಲ್ಲಮನಂತಹವರು, ಹೊಸ ಆಲೋಚನೆಗಳನ್ನು ಜಗತ್ತಿಗೆ ಕೊಟ್ಟಿದ್ದಾರೆ. ಕನ್ನಡದಲ್ಲೂ ಈ ಕಾಲದ ಅಗತ್ಯಕ್ಕೆ ತಕ್ಕಂತೆ ಇಡೀ ಜಗತ್ತೇ ಆಲಿಸಬೇಕಾದ(ಬಹುದಾದ), ವಿಚಾರಗಳು ಹುಟ್ಟಿರಬೇಕು. ಕನ್ನಡ ವಿಶ್ವವಿದ್ಯಾಲಯ ಬೇರೆ ಕನ್ನಡ ಇಲಾಖೆಗಳಂತಲ್ಲದೆ ಅನನ್ಯವಾಗಲು ಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಹೊಸ ವಿಚಾರದ ಹುಟ್ಟಿನ ಮಾಧ್ಯಮವಾಗಬೇಕು.

ಇವತ್ತಿನ ವಾಸ್ತವ ಮರೆಯದಂತೆ ನನ್ನೆರಡು ಸೂಚನೆಗಳು ಇಲ್ಲಿವೆ. ಬುದ್ಧಿವಂತ ಮಕ್ಕಳೆಲ್ಲ ಎಂ.ಬಿ.ಬಿ.ಎಸ್ ಮಾಡಲು ಹಾತೊರೆಯುತ್ತಾರೆ. ನನಗೆ ತಿಳಿದಂತೆ ಹಿಂದೆ ರಷ್ಯನ್ ಕಲಿತು ಸೋವಿಯತ್ ದೇಶಗಳಲ್ಲಿ ಮೆಡಿಸಿನ್ ಡಿಗ್ರಿ ಪಡೆಯುತ್ತಿದ್ದರು. ಕನ್ನಡಕ್ಕೆ ಬಲವೂ ಆತ್ಮಗೌರವವೂ ಬರಲು ಕನ್ನಡ ವಿಶ್ವವಿದ್ಯಾಲಯ ಪಾಶ್ಚಾತ್ಯ ಮೆಡಿಸನ್ ಅನ್ನು ಕನ್ನಡದಲ್ಲಿ ಕಲಿಸಲು ಮುಂದಾಗಲಿ. ಇದರಲ್ಲಿ ಪ್ರವೇಶ ಪಡೆಯುವವರಿಗೆಲ್ಲ ಜ್ಞಾನದ ಗ್ರಹಿಕೆಗೆ ಅಗತ್ಯವಾದಷ್ಟು ಇಂಗ್ಲಿಷ್ ಕೂಡ ಗೊತ್ತಿರಬೇಕು. ಪಾಶ್ಚಾತ್ಯ ವೈದ್ಯಶಾಸ್ತ್ರ ಕಲಿಯುವ ಈ ವಿದ್ಯಾರ್ಥಿಗಳೂ ನಮ್ಮ ದೇಸಿ ಪದ್ಧತಿಯ ಎಲ್ಲ ಔಷಧೋಪಚಾರಗಳನ್ನು ವೈಜ್ಞಾನಿಕವಾಗಿ ಸಂಶೋಧನೆಗೆ ಒಲಪಡಿಸಿ ಪರೀಕ್ಷಿಸಬೇಕು ಜ್ಞಾನಸೃಷ್ಟಿಯಾಗುವ ಬಗೆಗಳಲ್ಲಿ ಇದೂ ಒಂದು. ಮುಖ್ಯವಾಗಿ ಇಲ್ಲೊಂದು ಸೂಚನೆ. ಕನ್ನಡೇತರ ದೇಶದ ಯಾವ ವಿದ್ಯಾರ್ಥಿಯಾಗಲಿ, ಕನ್ನಡ ಕಲಿತು ಪ್ರವೇಶ ಬಯಸಿದರೆ, ಅರ್ಹತೆಯ ಆಧಾರದ ಮೇಲೆ ಅವರಿಗೂ ಇಲ್ಲಿ ಪ್ರವೇಶ ಸಿಗಬೇಕು. ತನ್ನ ಪರಿಧಿಗೆ ಸೀಮಿತವಾದ ಕನ್ನಡ ಆಗ ಚಲಿಸುವ ಭಾಷೆಯೂ ಆಗುತ್ತದೆ. ವಿಜ್ಞಾನಕ್ಕೆ ಸಂಬಂಧಿಸಿದಂತೆ ಇನ್ನೊಂದು ಸೂಚನೆ. ವಿಜ್ಞಾನಕ್ಕೊಂದು ಚರಿತ್ರೆಯಿದೆ. ಅದರ ಹಿಂದೊಂದು ತಾತ್ವಿಕ ದರ್ಶನವೂ ಇದೆ. ಇದು ಪಾಶ್ಚಾತ್ಯ ಮಾತ್ರವಲ್ಲ, ಜಾಗತಿಕವಾದ್ದು. ಈ ವಿಷಯದಲ್ಲಿ ಆಳವಾದ ಸಂಶೋಧನೆಯನ್ನು ಕನ್ನಡದಲ್ಲಿ ನಡೆಸುವಂತೆ ಆಗಬೇಕು. ಗತಿಸಿದ್ದ ವಿಜ್ಞಾನಿ ಸಿ.ಎಸ್.ಶೇಷಾದ್ರಿಯವರು ನಾವು ಕೇವಲ ಸತ್ಯವೆಂದು ಒಪ್ಪಿಕೊಳ್ಳುವ ಎಷ್ಟೊ ಪಾಶ್ಚಾತ್ಯ ವಿಜ್ಞಾನದ ಗ್ರಹಿಕೆಗಳ ಹಿಂದೆ ಅವರ ಮತಧರ್ಮಗಳೂ ಕಾಲದ ಚಲನೆ ಸರಳ ರೇಖಾತ್ಮಕವೆಂಬ ಈ ಮತಧರ್ಮಗಳ ಗ್ರಹಿಕೆಯೂ ಕೆಲಸ ಮಾಡುತ್ತವೆಯೆಂದು ಭಾವಿಸಿದ್ದರು. ನಾವಿದನ್ನು ಪರೀಕ್ಷಿಸಿದಲ್ಲಿ ಪ್ರಾಯಶಃ ಮುಂದಿನ ಯುಗಕ್ಕೆ ಬೇಕಾದ ಪರ್ಯಾಯ ತಂತ್ರಜ್ಞಾನವನ್ನು ಹುಟ್ಟು ಹಾಕುವ ವಿಜ್ಞಾನ ನಮ್ಮಲ್ಲಿ ಬೆಳೆಯಬಹುದು. ಹಾಗೆ ನೋಡಿದರೆ ವಿಜ್ಞಾನದ ಅತಿ ಸಂಕೀರ್ಣವಾದ ಭಾಗವಾದ ಗಣಿತಶಾಸ್ತ್ರಕ್ಕೆ ಬಹುದೊಡ್ಡ ಕೊಡುಗೆಗಳನ್ನು ನೀಡಿದ್ದು ಪೂರ್ವದ ದೇಶಗಳೇ. ಈ ಪೂರ್ವದ ದೇಶಗಳ ಪ್ರಾಚೀನ ಗಣಿತಜ್ಞರು ಇಂಗ್ಲಿಷ್‌ನಲ್ಲೇನೂ ಬರೆಯಲಿಲ್ಲ. ಅವರು ತಮಗೆ ತಿಳಿದಿದ್ದ ಸಂಸ್ಕೃತ ಅರಾಬಿಕ್‌ನಂತಹ ಭಾಷೆಗಳಲ್ಲೇ ಗಣಿತದ ಸಂಕೀರ್ಣ ತತ್ವಗಳನ್ನು ಮಂಡಿಸಿದ್ದರು ಎಂಬುದು ನಮಗೆ ನೆನಪಿರಬೇಕು.

ಪಾಶ್ಚಾತ್ಯ ವಿಜ್ಞಾನದ ಗ್ರಹಿಕೆ ವಿಧಾನಗಳಿಗೆ ಪರ್ಯಾಯವನ್ನು ಸೃಷ್ಟಿಸುವುದಕ್ಕೆ ನಮ್ಮ ಗ್ರಹಿಕೆಯ ಭಾಷೆಯೂ ಬದಲಾಗಬೇಕಿರುವ ಅಗತ್ಯವನ್ನು ಮನಗಂಡರೆ, ಕನ್ನಡದಲ್ಲಿ ಜ್ಞಾನಸೃಷ್ಟಿಯ ಅಗತ್ಯವೂ ಅನಿವಾರ್ಯತೆಯೂ ತಿಳಿಯುತ್ತದೆ. ಸಾಂಸ್ಕೃತಿಕ ಏಕರೂಪೀಕರಣವನ್ನು ಹೇರುತ್ತಿರುವ ಜಾಗತೀಕರಣದ ಈ ದಿನಗಳಲ್ಲಿ ಪರ್ಯಾಯದ ಸೃಷ್ಟಿಗೆ ನಮ್ಮ ಅನನ್ಯತೆಗಳನ್ನು ಪುನರಾವಿಷ್ಕರಿಸುವ ಅಗತ್ಯವಿದೆ. ಚೀನಾದಲ್ಲಿ ಮಾವೋ ಸಾಂಸ್ಕೃತಿಕ ಕ್ರಾಂತಿಯ ಮೂಲಕ ಪಶ್ಚಿಮಕ್ಕಿಂತ ಭಿನ್ನವಾದ ತಂತ್ರಜ್ಞಾನವನ್ನೊಂದನ್ನು ಬೆಳೆಸಲು ಪ್ರಯತ್ನಿಸಿದರು. ಆದರೆ ಇದು ಪರ್ಯಾಯ ತಂತ್ರಜ್ಞಾನವಾಗಿರಲಿಲ್ಲ. ಬದಲಿಗೆ ಪಶ್ಚಿಮದ ತಂತ್ರಜ್ಞಾನ ಸಂಸ್ಕೃತಿಯನ್ನೇ ಶ್ರೇಷ್ಠವೆಂದು ಒಪ್ಪಿಕೊಂಡು ಆ ಹಂತವನ್ನು ತಲುಪುವುದಕ್ಕೆ ಅಗತ್ಯವಿರುವ ಮಧ್ಯಮ ತಂತ್ರಜ್ಞಾನವೊಂದನ್ನು ರೂಪಿಸುವ ಪ್ರಯತ್ನ ಅದಾಗಿತ್ತು. ನಮಗೆ ಬೇಕಿರುವುದು ಇಂಥ ಮಧ್ಯಮ ತಂತ್ರಜ್ಞಾನವಲ್ಲ. ನಮಗೆ ಬೇಕಿರುವುದು ಭೂಮಿಯನ್ನು ಉಳಿಸಿ ಬೆಳೆಸುವುದಕ್ಕೆ ಅಗತ್ಯವಿರುವ ತಂತ್ರಜ್ಞಾನ. ಭೂಮಿಯ ವಾತಾವರಣದ ಶಾಖ ಏರುತ್ತ ಇರುವ ನಮ್ಮ ಆತಂಕದ ಕಾಲದಲ್ಲಿ ಪರ್ಯಾಯಗಳನ್ನು ಚಿಂತಿಸುವ ಗ್ರಹಿಸುವ ಮತ್ತು ಸಾಕಾರಗೊಳಿಸುವ ಸಂಶೋಧನೆಯ ದಾರಿಯಲ್ಲಿ ನಮ್ಮ ಕನ್ನಡ ವಿಶ್ವವಿದ್ಯಾಲಯವೂ ಹೆಜ್ಜೆಗಳನ್ನಿಡಬೇಕು. ಇಗಾಗಲೇ ಇರುವ ಕನ್ನಡ ಭಾಷಾತಜ್ಞರು ಈ ದಿಕ್ಕಿನಲ್ಲಿ ಕನ್ನಡ ಭಾಷೆ ಸಜ್ಜಾಗುವಂತೆ ಬೆಳೆಸಬೇಕು. ಹೀಗೆ ಕನ್ನಡ ಬೆಳೆದರೆ ಈ ಭಾಷೆಯನ್ನು ಇಂದಿಗೂ ಉಳಿಸಿಕೊಂಡಿರುವ ದೇಶದ ಬಡಬಗ್ಗರಿಗೆ ಕನ್ನಡ ಧೀಮಂತ ವಿಶ್ವಭಾಷೆಯಾಗಿ ಒದಗಿದಂತಾಗುತ್ತದೆ.

ವಿಶ್ವವಿದ್ಯಾಲಯದ ನೆಲವನ್ನು ಪರಭಾರೆ ಮಾಡಲು ಯಾವ ಸಂದಿಗ್ಧದಿಂದಲೊ ಒಪ್ಪಿರುವಂತೆ ಕಾಣುವ ಕುಲಪತಿ, ರಾಜ್ಯಪಾಲರಿಗೆ ಬರೆಯುವ ಧೈರ್ಯ ಮಾಡಿ, ಈ ಕನಸಿನ ಭೂಮಿಕೆಯಾಗಿ ನೆಲವನ್ನು ಉಳಿಸಿಕೊಳ್ಳಬೇಕೆಂದು ಅವರಿಂದ ನಾಡೋಜ ಪಡೆದ ನಾನು ಕೋರುತ್ತೇನೆ- ಯು.ಆರ್.ಅನಂತಮೂರ್ತಿ"

ಕರ್ನಾಟಕದ ಸಮಸ್ತ ಪ್ರಜ್ಞಾವಂತರ ಬೆಂಬಲದಿಂದ ಭೂಹೋರಾಟ ಯಶಸ್ಸನ್ನು ಕಂಡಿತು. ಸದನದಲ್ಲಿ ಮುಖ್ಯಮಂತ್ರಿಯವರು ವಶಪಡಿಸಿಕೊಂಡಿದ್ದ ಭೂಮಿಯನ್ನು ವಿಶ್ವವಿದ್ಯಾಲಯಕ್ಕೆ ಮರಳಿಸುವ ಹೇಳಿಕೆ ನೀಡಿದರು. 'ಪ್ರಜಾವಾಣಿ'ಯು ಈ ಘಟನೆಯನ್ನು 'ಕನ್ನಡದ ನೆಲ ಕನ್ನಡಕ್ಕೆ' ಎಂದು ತಲೆಬರೆಹದಲ್ಲಿ ಪ್ರಕಟಿಸಿತು. ಇದಾದ ಮೇಲೆ ವಿಶ್ವವಿದ್ಯಾಲಯ 'ಕನ್ನಡನಾಡು ಮತ್ತು ಕನ್ನಡ ವಿಶ್ವವಿದ್ಯಾಲಯದ ಮನ್ನೋಟ' ಎಂಬ ವಿಚಾರ ಸಂಕಿರಣ ಹಮ್ಮಿಕೊಂಡಿತು. ಉದ್ಘಾಟನೆಗೆ ಅನಂತಮೂರ್ತಿ ಅವರನ್ನೇ ಆಹ್ವಾನಿಸಿತು- ಜತೆಗೆ ಈ ಹಿಂದಿನ ಎಲ್ಲ ಕುಲಪತಿಗಳನ್ನು. ಆಗ ಅನಂತಮೂರ್ತಿ ಅವರು ಮತ್ತೊಮ್ಮೆ ಕನ್ನಡದಲ್ಲಿ ಲೋಕದ ಎಲ್ಲ ವಿದ್ಯೆಯನ್ನು ಕಲಿಯುವಂತೆ ಅದನ್ನು ಸಜ್ಜುಗೊಳಿಸುವ ಬಗ್ಗೆ ಕನಸನ್ನು ಹಂಚಿಕೊಂಡರು. ಇಂಗ್ಲಿಶ್ ಮಾಧ್ಯಮದಲ್ಲಿ ಕಲಿತವರು ಈ ನೆಲಕ್ಕೆ ಅನಾಥರಾಗುತ್ತಾರೆ. ಇದು ಕನ್ನಡಕ್ಕೆ ಮಾತ್ರವಲ್ಲ ಎಲ್ಲ ಭಾರತೀಯ ಭಾಷೆಗಳಿಗೆ ಬಂದಿರುವ ಅಪಾಯ ಎಂದು ಹೇಳಿದರು. ಕನ್ನಡ ವಿಶ್ವವಿದ್ಯಾಲಯವು ಕನ್ನಡದಲ್ಲಿಯೇ ಒಂದು ಸಮಾಜವಿಜ್ಞಾನದ ಕೋರ್ಸನ್ನು ಮಾಡಬೇಕೆಂದೂ ಅದು ಭಾರತದಲ್ಲಿಯೇ ವಿಶಿಷ್ಟವಾದ ಪದವಿಯಾಗಿರಬೇಕೆಂದೂ ತಮ್ಮ ಆಸೆ ಹಂಚಿಕೊಂಡರು.

ಅನಂತಮೂರ್ತಿಯವರು ತಮ್ಮ ಪತ್ರದಲ್ಲಾಗಲಿ, ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾಡಿದ ಉಪನ್ಯಾಸಗಳಲ್ಲಾಗಲಿ ಪ್ರಕಟಿಸಿದ ಚಿಂತನೆಯಲ್ಲಿ ಅನೇಕ ಕಡೆ ತಾತ್ವಿಕ ಭಿನ್ನಮತ ತೋರಬಹುದು; ಪ್ರಶ್ನೆ ಎತ್ತಬಹುದು. ಆದರೆ ದೇಶಭಾಷೆಗಳು ತಮ್ಮ ನಿಜಶಕ್ತಿಯನ್ನು ಕಂಡುಕೊಳ್ಳಬೇಕೆಂಬ ಅವರ ಕನಸು ಪ್ರಾಮಾಣಿಕವಾಗಿತ್ತು. ಅವರ ಕಾಮನ್‌ಸ್ಕೂಲಿನ ಕಲ್ಪನೆಯಲ್ಲಿ, ಮಕ್ಕಳು ಎಳವೆಯಲ್ಲಿ ಮನೆಮಾತು ಇಲ್ಲವೇ ಪರಿಸರ ಭಾಷೆಯಲ್ಲೇ ಕಲಿಯಬೇಕೆಂಬ ಶಿಕ್ಷಣನೀತಿ ಮಾತ್ರವಿರಲಿಲ್ಲ, ಒಂದು ಪ್ರದೇಶದ ಎಲ್ಲ ಮಕ್ಕಳು ತರತಮಗಳಿಲ್ಲದ ಶಾಲಾ ವ್ಯವಸ್ಥೆಯಲ್ಲಿ ಕಲಿಯಬೇಕೆಂದು ಸಮಾಜವಾದಿ ಆಶಯವೂ ಇತ್ತು; ಈ ಆಶಯವು ಅತ್ಯುತ್ತಮ ಬರೆಹ ಅಥವಾ ಚಿಂತನೆ ಹುಟ್ಟುವ ಸಾಧ್ಯತೆ ಹೆಚ್ಚಿರುವುದು, ಮನೆಮಾತು ಇಲ್ಲವೇ ಪರಿಸರ ಭಾಷೆಯಲ್ಲಿ ಬರೆದಾಗಲೇ ಎಂಬ ಮೀಮಾಂಸೆಯ ವಿಸ್ತರಣೆಯೂ ಆಗಿತ್ತು. ಕೋಮುವಾದದ ವಿರುದ್ಧದ ಹೋರಾಟವು ಕನ್ನಡ ಪರವಾದ ಹೋರಾಟವೂ ಆಗಿತ್ತು.

## ಡಿಸೆಂಬರ್ 29 ರಂದು ವಿಶ್ವಮಾನವ ದಿನಾಚರಣೆ

■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾಡಳಿತದ ವತಿಯಿಂದ ವಿಶ್ವಮಾನವ ದಿನಾಚರಣೆ ಕಾರ್ಯಕ್ರಮವನ್ನು ಡಿಸೆಂಬರ್ 29 ರಂದು ಬೆಳಿಗ್ಗೆ 11 ಗಂಟೆಗೆನಗರದಸಾಹಿತ್ಯಭವನದಲ್ಲಿಆಯೋಜಿಸಲಾಗಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದರಾದ ಕರಡಿ ಸಂಗಣ್ಣ, ಶಾಸಕರುಗಳಾದ ಬಸವರಾಜ ರಾಯರೆಡ್ಡಿ, ದೊಡ್ಡನಗೌಡ ಹನುಮಗೌಡ ಪಾಟೀಲ, ಗಾಲಿ ಜನಾರ್ಧನರೆಡ್ಡಿ ಹಾಗೂ ವಿಧಾನ ಪರಿಷತ್ ಸದಸ್ಯರುಗಳಾದ ಶರೀಲ್ ಜಿ.ನಮೋಶಿ, ಡಾ. ಚಂದ್ರಶೇಖರ್ ಬಿ.ಪಾಟೀಲ, ಶರಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪೂರ ಹಾಗೂ ಹೇಮಲತಾ ನಾಯಕ ಪಾಲ್ಗೊಳ್ಳುವರು.

ವಿಶೇಷ ಆಹ್ವಾನಿತರಾಗಿ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ ಮೋಹನ್ ರಾಜ್, ಆಗಮಿಸುವರು. ಕೊಪ್ಪಳ ಸಾಹಿತಿಗಳಾದ ಅಕ್ಬರ್ ಸಿ. ಕಾಲಿಮಿರ್ಚಿ ಅವರು ವಿಶ್ವಮಾನವ ದಿನಾಚರಣೆ ಕುರಿತು ವಿಶೇಷ ಉಪನ್ಯಾಸ ನೀಡುವರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ಸುನೀಲ್ ವಂಟಗೋಡಿ, ಭಾಗವಹಿಸುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕೊಟ್ರೇಶ ಮರಬನಳ್ಳಿ ಅವರು ತಿಳಿಸಿದ್ದಾರೆ.

## ಅಲ್ಪಸಂಖ್ಯಾತರ ಕಾನೂನು ಪದವಿಧರರ ವೃತ್ತಿ ಅರ್ಜಿ ಸಲ್ಲಿಕೆಯ ಅವಧಿ ವಿಸ್ತರಣೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2023-24ನೇ ಸಾಲಿಗೆ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಸಮುದಾಯದ ಕಾನೂನು ಪದವೀಧರರ ವೃತ್ತಿ ತರಬೇತಿ ಶಿಷ್ಯವೇತನಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಈಗಾಗಲೇ ಅರ್ಜಿ ಆಹ್ವಾನಿಸಿಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಜನವರಿ 10 ರವರೆಗೆ ವಿಸ್ತರಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ಹತ್ತಿರದ ಮೌಲನಾ ಆಜಾದ್ ಭವನದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ ಅಥವಾ ಬಳ್ಳಾರಿ ಕಚೇರಿ ದೂ.08392-245755, ಮೊ.8310321101, ಸಿರುಗುಪ್ಪ-9148889975, ಸಂಡೂರು-9036925966 ಗೆ ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದಾರೆ.

# ಬಾಲ್ಯ ವಿವಾಹ ತಡೆಗೆ ಸಹಕರಿಸಿ

## ತಹಶೀಲ್ದಾರ ವಿಠ್ಠಲ್ ಚೌಗಲಾ ಹೇಳಿಕೆ | ಬಾಲ್ಯ ವಿವಾಹ ತಡೆಗಟ್ಟುವಲ್ಲಿ ಕರ್ತವ್ಯ ನಿರ್ವಹಿಸಿ



■ **ಹಂಪಿ ಟೈಮ್ಸ್ ಕೊಪ್ಪಳ**

ಬಾಲ್ಯ ವಿವಾಹ ತಡೆಗಟ್ಟುವಲ್ಲಿ ರಚಿಸಲಾದ ತಾಲ್ಲೂಕು ಮಟ್ಟದ ಸಮಿತಿಯ ಎಲ್ಲ ಸದಸ್ಯರು, ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ತಹಶೀಲ್ದಾರ ವಿಠ್ಠಲ್ ಚೌಗಲಾ ಅವರು ತಿಳಿಸಿದರು.

ಬುಧವಾರದಂದು ಬಾಲ್ಯ ವಿವಾಹಗಳನ್ನು ತಡೆಯುವ ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಮಿತಿ ಸಭೆಗಳಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳು ಪ್ರತಿನಿಧಿಗಳನ್ನು ಸಭೆಗೆ ನಿಯೋಜಿಸದೆ ಖುದ್ದಾಗಿ ಅಧಿಕಾರಿಗಳೇ ಹಾಜರಿರಬೇಕು. ಇದರಿಂದ ಬಾಲ್ಯ ವಿವಾಹ ಪ್ರಕರಣಗಳನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳು, ಪರಸ್ಪರ ಸಮನ್ವಯ ಸಾಧನೆ ಮುಂತಾದವುಗಳ ಕುರಿತು ಎಲ್ಲರಿಗೂ ಸೂಕ್ತ ಮಾಹಿತಿ ದೊರೆಯುತ್ತದೆ. ಅಧಿಕಾರಿ, ಸಮಿತಿ ಸದಸ್ಯರು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜಯಶ್ರೀ ಆರ್ ಮಾತನಾಡಿ, 2023-24 ರಲ್ಲಿ ಬಾಲ್ಯವಿವಾಹಕ್ಕೆ ಸಂಬಂಧಿಸಿದ ಸ್ವೀಕರಿಸಿದ ದೂರುಗಳು ಮತ್ತು ತಡೆಹಿಡಿದ ಮಾಹಿತಿಗಳನ್ನು ತಿಳಿಸಿದರು. ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯಿತಿಗಳಲ್ಲಿ ಕಡ್ಡಾಯವಾಗಿ 3 ತಿಂಗಳಿಗೊಮ್ಮೆ ಮಹಿಳೆ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ ಸಭೆಯನ್ನು ನಡೆಸಲು ತಿಳಿಸಿದಂತೆ, ಜನವರಿ-2024ರ ಮಾಹೆಯಲ್ಲಿ ಎಲ್ಲಾ ಪಂಚಾಯತಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ ಸಭೆಯನ್ನು ಸಂಬಂಧಿಸಿದ ನೋಡಲ್ ಅಧಿಕಾರಿಗಳು ಸಭೆ ನಡೆಸಿ ಜಿಪಿಎಸ್ ಫೋಟೋ ಮತ್ತು ವರದಿಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ನೀಡಲು ಸೂಚಿಸಿದರು. ಬಾಲ್ಯವಿವಾಹ ತಡೆದ ಅನುಸರಣಾ ಭೇಟಿಯ ವರದಿಯನ್ನು ನಿಗದಿಪಡಿಸಿರುವ ಎಲ್ಲಾ ಇಲಾಖೆಯವರು ಭೇಟಿ ಮಾಡಿ ವರದಿಯನ್ನು ತಪ್ಪದೇ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ನೀಡಬೇಕು ಎಂದು ಹೇಳಿದರು.

ಸೀಡ್ಸ್, ಹೋಟೆಲ್, ಇಟ್ಟಂಗಿಬಟ್ಟಿ, ಉಸುಕು ವ್ಯಾಪಾರ, ಕೋಳಿಫಾರಂ ಮುಂತಾದೆಡೆ ಬಾಲಕಾರ್ಮಿಕರು ದುಡಿಯುತ್ತಿದ್ದು, ಕೈಗಾರಿಕೆಗಳಲ್ಲಿ ನಿಯೋಜಿತ ಅಧಿಕಾರಿಗಳು ಭೇಟಿ ನೀಡಿ ವರದಿ ಕೊಡಬೇಕು. ಬಾಲಕಾರ್ಮಿಕರು, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸಬೇಕು. ಮುಂಬರುವ ಜನವರಿ-2024ರ ತಿಂಗಳಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ಆಯೋಜಿಸುವ ಗ್ರಾಮ ಪಂಚಾಯತಿಗಳು ಮುಖ್ಯವಾಗಿ ಸಭೆಗೆ ಪ್ರೌಢಶಾಲಾ ಮಕ್ಕಳನ್ನು ಹಾಜರಿರುವಂತೆ ನೋಡಿಕೊಳ್ಳಬೇಕು. ಬಾಲ್ಯವಿವಾಹ ಹೆಚ್ಚಾಗಿ ಕಂಡುಬರುವ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕ್ರಿಯಾ ಯೋಜನೆಯನ್ನು ರೂಪಿಸಬೇಕು. ಸಾಮೂಹಿಕ ವಿವಾಹಗಳ ಆಯೋಜಕರು ಕಡ್ಡಾಯವಾಗಿ ಅಧ್ಯಕ್ಷರು/ತಹಶೀಲ್ದಾರರ ಅನುಮತಿಯನ್ನು ಪಡೆಯತಕ್ಕದ್ದು ಹಾಗೂ ವಧು-ವರರ ವಯಸ್ಸಿನ ದಾಖಲೆಗಳನ್ನು ನಿಗದಿತ ಸಮಯದಲ್ಲಿ ನೀಡತಕ್ಕದ್ದು. ಸಾಮೂಹಿಕ ವಿವಾಹಗಳ ಆಯೋಜಕರು ಸಂಸ್ಥೆ/ಕಮಿಟಿಯನ್ನು ಕಡ್ಡಾಯವಾಗಿ ನೋಂದಣಿ ಮತ್ತು ನವೀಕರಣ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು, ಕಾರ್ಮಿಕ ಇಲಾಖೆ, ಪೊಲೀಸ್ ಇಲಾಖೆ ಮತ್ತು ನಗರಸಭೆ ಸಿಬ್ಬಂದಿಗಳು, ಮೇಲ್ವಿಚಾರಕಿಯರು, ಮಕ್ಕಳ ಸಹಾಯವಾಣಿ-1098 ಕೊಪ್ಪಳ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಹಾಗೂ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳು ಹಾಜರಿದ್ದರು.

# ಸರಸ್ವತಿ ವಿದ್ಯಾಮಂದಿರದ ದಿನದರ್ಶಿಕೆ ಬಿಡುಗಡೆ ಮಾಡಿದ ಗವಿಶ್ರೀಗಳು



■ **ಹಂಪಿ ಟೈಮ್ಸ್ ಕೊಪ್ಪಳ :**

ನಗರದ ಸರಸ್ವತಿ ವಿದ್ಯಾಮಂದಿರ ಪ್ರಾಥಮಿಕ ಹಾಗೂ ಪ್ರೌಢಶಾಲೆಯಿಂದ ಹೊರತರಲಾಗಿರುವ 2024ನೇ ವರ್ಷದ ದಿನದರ್ಶಿಕೆ(ಕ್ಯಾಲೆಂಡರ್ ) ಯನ್ನು ಗವಿಮಠದ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಬಿಡುಗಡೆ ಮಾಡಿದರು. ಹೊಸ ವರ್ಷ ಎಲ್ಲರಿಗೂ ಶುಭವಾಗಲಿ. ಮಕ್ಕಳ ಭವಿಷ್ಯ ಉಜ್ವಲವಾಗಲಿ ಎಂದು ಗವಿಶ್ರೀಗಳು ಹಾರೈಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಆರ್. ಎಚ್.ಅತ್ತನೂರು, ಮುಖ್ಯೋಪಾಧ್ಯಾಯನಿ ಶ್ರೀಮತಿ ರೇಣುಕಾ ಅತ್ತನೂರ , ಶಾಲೆಯ ಶಿಕ್ಷಕರಾದ ಲಕ್ಷ್ಮೀ, ದುರುಗೇಶ್, ಮಹೇಶ್ವರಿ ಹಿರೇಮಠ, ಸುಜಾತಾ ಹಿರೇಮಠ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕೃಷಿ ಭಾಗ್ಯ ಯೋಜನೆಗೆ ಡಿ.31 ಕೊನೆಯ ದಿನ

■ **ಹಂಪಿ ಟೈಮ್ಸ್ ಕೊಪ್ಪಳ**

2023-24 ನೇ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯಡಿ ವಿವಿಧ ಘಟಕಗಳ ಸೌಲಭ್ಯ ಪಡೆಯಲು ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯ ನಮೂನೆಗಳು ಸಮೀಪದ ರೈತ ಸಂಪರ್ಕ ಕೇಂದ್ರಗಳಲ್ಲಿ ಲಭ್ಯವಿರುತ್ತವೆ. ಅರ್ಜಿ ಸಲ್ಲಿಸಲು ಡಿಸೆಂಬರ್ 31 ಕೊನೆಯ ದಿನವಾಗಿದೆ. ರೈತರು ಕನಿಷ್ಟ 1 ಎಕರೆ ಜಮೀನನ್ನು ಹೊಂದಿರಬೇಕು. ಯೋಜನೆಯು ಒಣ ವಲಯ ಕ್ಷೇತ್ರದ ರೈತರಿಗೆ ಮಾತ್ರ ಸಂಬಂಧಪಟ್ಟಿರುತ್ತದೆ. ಕ್ಷೇತ್ರಬದು ನಿರ್ಮಾಣ, ಕೃಷಿ ಹೊಂಡ, ನೀರು ಇಂಗದಂತೆ ತಡೆಯಲು ಪಾಲಿಥಿನ್ ಹೊದಿಕೆ, ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ, ಕೃಷಿ ಹೊಂಡದಿಂದ ನೀರು ಎತ್ತಲು ಡಿಸೇಲ್/ ಪೆಟ್ರೋಲ್ ಪಂಪ್ಸೆಟ್ ಹಾಗೂ ನೀರನ್ನು ಬೆಳೆಗೆ ಹಾಯಿಸಲು ಸೂಕ್ಷ್ಮ (ತುಂತುರು ಹನಿ) ನೀರಾವರಿ ಸೇರಿದಂತೆ ನಾನಾ ಸೌಲಭ್ಯಗಳನ್ನು ನಿಯಮಾನುಸಾರ ನೀಡಲಾಗುವುದು.

ಒಂದುವೇಳೆ ಸಂಬಂಧಪಟ್ಟ ತಾಲೂಕಿಗೆ / ಹೋಬಳಿಗೆ ನಿಗದಿಪಡಿಸಿದ ಗುರಿಗಿಂತ ಹೆಚ್ಚು ಅರ್ಜಿಗಳು ಸ್ವೀಕೃತವಾದರೆ ಲಾಟರಿ ಎತ್ತುವ ಮೂಲಕ ಫಲಾನುಭವಿಗಳನ್ನು ಗುರಿಗಳನ್ವಯ ಆಯ್ಕೆ ಮಾಡಲಾಗುವುದು. ರೈತರು ತಮ್ಮ ಜಮೀನುಗಳಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿಕೊಂಡು ಮಳೆ ನೀರನ್ನು ಸಂಗ್ರಹಿಸಿ ಬೆಳೆಗಳ ಸಂದಿಗ್ಧ ಹಂತದಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು ಕೃಷಿ ಭಾಗ್ಯ ಯೋಜನೆಯ ಉದ್ದೇಶವಾಗಿದ್ದು, ಮೇಲೆ ತಿಳಿಸಿದ ಎಲ್ಲಾ ಘಟಕಗಳನ್ನು ಕಡ್ಡಾಯವಾಗಿ ಅನುಷ್ಠಾನ ಮಾಡಬೇಕು ಜಂಟಿ ಕೃಷಿ ನಿರ್ದೇಶಕರು್ಲ ತಿಳಿಸಿದ್ದಾರೆ.

**ಕವಿ ಮನಸು**

## ದಯೆದೋರು ಅಯ್ಯಪ್ಪ



ಸ್ವಾಮಿಯೆ ಅಯ್ಯಪ್ಪ ದಯೆಯನು
ತೋರಪ್ಪ
ಕರುಣೆಯ ಕಿರಣವ ಬೀರಪ್ಪ
ಸರದಿಯಲಿರುವರು ಮಕ್ಕಳು ಮರಿಗಳು
ಬೇಗನೆ ದಾರಿಯ ತೋರಪ್ಪ॥ಪ॥

ಸಾಗರದಂದದಿ ಸೇರಿದ ಮಂದಿಯ
ಶಿರದಲಿ ಇರುಮುಡಿ ಕಾಣುತಿದೆ
ದರ್ಶನ ಪಡೆಯುವ ಕಾತರ ಮನದಲಿ
ಭಕ್ತಿಯ ಭಾವವು ಮೆರೆಯುತಿದೆ

ವ್ರತಗಳ ದಿನದಲಿ ಕಠಿಣದ ನಿಲುವಲಿ
ಮರೆವರು ಅಂಟಿದ ಚಟಗಳನು
ಸೂರ್ಯನು ಮೂಡುವ ಮೊದಲಿಗೆ
ಗೈವರು
ತಣ್ಣನೆ ಜಲದಲಿ ಜಳಕವನು

ಕಪ್ಪಿನ ಉಡುಪಲಿ ವ್ರತವನು ಮಾಡಿದ
ಭಕ್ತರ ಕೂಗದು ಅಯ್ಯಪ್ಪ
ಸೇರಿದ ಭಕ್ತರ ಭಕ್ತಿಯ ಮೆಚ್ಚುತ
ದರ್ಶನ ಬೇಗನೆ ನೀಡಪ್ಪ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

**ಇ-ಪೇಪರ್ ಉಚಿತ**
ಇಂದೇ ಹಂಪಿ ಟೈಮ್ಸ್ ವಾಟ್ಸ್‌ಪ್ ಚಾನಲ್‌ಗೆ ಸೇರಿ, ಇ-ಪೇಪರ್ ಉಚಿತವಾಗಿ ಪಡೆಯಿರಿ

**ತುಂಗಭದ್ರಾ ನೀರಿನ ಮಟ್ಟ**



| ಬುಧವಾರ : 27-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1589.41 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.548 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1626.8 ಅಡಿ |
| ಒಳ ಹರಿವು | 471 ಕ್ಯುಸೆಕ್ |
| ಹೊರ ಹರಿವು | 9131 ಕ್ಯುಸೆಕ್ |
| ಸಾಮರ್ಥ್ಯ | 79.135 ಟಿಎಂಸಿ |

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಯುವ ನಿಧಿ ಯೋಜನೆಗೆ ನೋಂದಣಿ ಆರಂಭ

■ **ಹಂಪಿ ಟೈಮ್ಸ್ ಕೊಪ್ಪಳ**

ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಬೆಂಗಳೂರಿನ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಡಿಸೆಂಬರ್ 26 ರಂದು ಯುವ ನಿಧಿ ಯೋಜನೆಗೆ ವಿದ್ಯುಕ್ತವಾಗಿ ಚಾಲನೆ ನೀಡಿದ್ದು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಾಹುಲ್ ರತ್ನಂ ಪಾಂಡೇಯ ಅವರು ಬುಧವಾರದಂದು ಪೋಸ್ಟರ್ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಹಾಗೂ ಉದ್ಯೋಗ ವಿನಿಮಯ ಅಧಿಕಾರಿಗಳು, ವಿವಿಧ ಇಲಾಖೆಯ ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳು, ಇಲಾಖೆಯ ಸಹಾಯಕ ನಿರ್ದೇಶಕರು, ಸಹಾಯಕ ಸಾಂಖ್ಯಿಕ ಅಧಿಕಾರಿ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಅಡಿಯಲ್ಲಿ ಯುವನಿಧಿ ಯೋಜನೆ ಅನುಷ್ಠಾನಗೊಳ್ಳುತ್ತಿದ್ದು, ಈ ಯೋಜನೆಯಲ್ಲಿ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಪ್ರತಿ ತಿಂಗಳಿಗೆ ಪದವೀಧರರಿಗೆ ರೂ.3,000/- ಹಾಗೂ ಡಿಪ್ಲೋಮಾ ಪದವೀಧರರಿಗೆ ರೂ.1,500/-ರಂತೆ ನಿರುದ್ಯೋಗ ಭತ್ಯೆಯನ್ನು ನೀಡಲಾಗುವುದು. 2023ರಲ್ಲಿ ಪದವಿ/ಡಿಪ್ಲೊಮಾ ಉತ್ತೀರ್ಣರಾದ ವಿದ್ಯಾರ್ಥಿಗಳು, ಪದವಿ/ಡಿಪ್ಲೋಮಾ ನಂತರ ಕನಿಷ್ಠ 6 ತಿಂಗಳ ಅವಧಿಯವರೆಗೆ ಸರ್ಕಾರಿ/ಖಾಸಗಿ ಉದ್ಯೋಗ ಹೊಂದಿಲ್ಲದವರು, ಸ್ವಯಂ ಉದ್ಯೋಗ ಹೊಂದಿಲ್ಲದವರು, ಉನ್ನತ ವಿದ್ಯಾಭ್ಯಾಸ ಮುಂದುವರಿಸದೇ ಇರುವವರು, ಕರ್ನಾಟಕದಲ್ಲಿ ವಾಸವಿರುವ (ಕನಿಷ್ಠ 6 ವರ್ಷಗಳವರೆಗೆ ಪದವಿ/ಡಿಪ್ಲೋಮಾದವರೆಗೆ ಅಧ್ಯಯನ ಮಾಡಿದವರು) ಫಲಾನುಭವಿಗಳು ನೋಂದಣಿಗೆ ಅಗತ್ಯವಿರುವ ದಾಖಲಾತಿಗಳಾದ ಎಸ್.ಎಸ್.ಎಲ್.ಸಿ., ಪಿ.ಯು.ಸಿ, ಪದವಿ/ಡಿಪ್ಲೋಮಾ ಪ್ರಮಾಣ ಪತ್ರಗಳೊಂದಿಗೆ ಹೆಸರು ನೋಂದಣಿ ಮಾಡಿಕೊಳ್ಳಬಹುದು.

ಫಲಾನುಭವಿಗಳು ನೋಂದಾಯಿಸಿಕೊಳ್ಳಲು ಸೇವಾಸಿಂಧು ಪೋರ್ಟಲ್ https://sevasindhugs.karnataka.gov.in ಗೆ ಭೇಟಿ ನೀಡಬೇಕು. ಅಥವಾ ಉಚಿತವಾಗಿ ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿ ಕೂಡ ಅರ್ಜಿ ಸಲ್ಲಿಸಬಹುದು. ಸೇವಾ ಸಿಂಧು ಪೋರ್ಟಲ್‌ನಲ್ಲಿ ಮಾಸಿಕವಾಗಿ ಸ್ವಯಂ ಘೋಷಿತ ನಿರುದ್ಯೋಗ ಪ್ರಮಾಣ ಪತ್ರ ದೃಢೀಕರಣ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ:18005999918 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

**ಮಾನ್ಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೂಡ್ಲಿಗಿ**
**ಕ್ರಿ.ಎಮ್.ಸಿ. ಸಂಖ್ಯೆ: 1242/2023**

**ಇವರ ಮಧ್ಯ: ಶ್ರೀಮತಿ ಬಸಕ್ಕೆ ಮತ್ತು ಇತರರು ...ಅರ್ಜಿದಾರರು ಮತ್ತು ಮಾನ್ಯ ತಹಶೀಲ್ದಾರರು, ಜನನ ಮತ್ತು ಮರಣ ನೊಂದಣಾಧಿಕಾರಿ, ಕೂಡ್ಲಿಗಿ ... ಎದುರುದರರು**

**ಪ್ರಕಟಣೆ**

ಮೇಲ್ಕಾಣಿಸಿದ ಅರ್ಜಿದಾರರಾದ 1) ಬಸಕ್ಕ ಗಂಡ: ದಿ.ಮಲ್ಲಣ್ಣ, 2) ಜೆ. ನಾಗರಾಜ, 3) ಸಿದ್ಧಮ್ಮ, 4) ಚೆನ್ನಮ್ಮ, 5) ಜೆ. ಶರಣಪ್ಪ, ಈ ಅರ್ಜಿದಾರರು ರಾಮದುರ್ಗ ಗ್ರಾಮ ವಾಸಿಗಳಾಗಿದ್ದು, ಅರ್ಜಿದಾರರು ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಇದಕ್ಕೆ ಸಂಬಂಧಿಸಿದ್ದು, ಮರಣ ಹೊಂದಿದವರು ಜಂಭವ್ವ ಗಂಡ ದಿ. ಜೆ.ಮಲ್ಲಣ್ಣ ಮರಣ ಹೊಂದಿದ ದಿನಾಂಕ: 06/08/2005 ರಂದು ರಾಮದುರ್ಗ ಗ್ರಾಮದಲ್ಲಿ ಮರಣ ಹೊಂದಿದ್ದು, ಮೊದಲನೇ ಅರ್ಜಿದಾರರಿಗೆ ಅತ್ತೆಯಾಗಿರುತ್ತಾರೆ. ಇನ್ನುಳಿದ ಅರ್ಜಿದಾರರಿಗೆ ಅಜ್ಜಿಯಾಗಿರುತ್ತಾರೆ. ಹಾಗಾಗಿ ಅರ್ಜಿದಾರರು ಇವರ ಮರಣ ದಿನಾಂಕವನ್ನು ನೋಂದಣಿ ಮಾಡಿಸಿಲ್ಲದ ಕಾರಣ ಸದರಿ ಬಸಮ್ಮ ಅವರ ಮರಣ ಪ್ರಮಾಣ ಪತ್ರವನ್ನು ನೀಡಲು ಎದುರುದಾರರಿಗೆ ಆದೇಶ ನೀಡಲು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿದ್ದು, ಸದರಿ ಅರ್ಜಿಯ ಸಂಖ್ಯೆ: ಕ್ರಿಮಿನಲ್ ಎಂ.ಸಿ. ನಂ.1242/2023 ಇರುತ್ತದೆ. ಸದರಿ ಅರ್ಜಿಯು ದಿನಾಂಕ: 06/1/2024 ರಂದು ಬೆಳ್ಳಿಗ್ಗೆ 11 ಗಂಟೆಗೆ ನಿಗಧಿಪಡಿಸಿದ್ದು, ಸದರಿ ಅರ್ಜಿಗೆ ಸಂಬಂಧಪಟ್ಟ ಯಾವುದೇ ತಂಟೆ ತಕರಾರು ಇದ್ದಲ್ಲಿ ಮೇಲ್ಕಾಣಿಸಿದ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮುಖಾಂತರ ಸಂಬಂಧಪಟ್ಟ ದಾಖಲೆಗಳೊಂದಿಗೆ, ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು ತಪ್ಪಿದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಇತ್ಯಾರ್ಥಗೊಳಿಸಲಾಗುವುದು. ಹೀಗೆಂದು ದಿನಾಂಕ: 16/11/2023 ಘನ ನ್ಯಾಯಾಲಯದ ಸಹಿ ಮೊಹರಿನೊಂದಿಗೆ ನೀಡಿರುತ್ತದೆ.

ಸ್ಥಳ: ಕೂಡ್ಲಿಗಿ
ದಿನಾಂಕ: 16/11/2023
**ಜೆ.ಎನ್. ಮಂಜುನಾಥ, ವಕೀಲರು, ಕೂಡ್ಲಿಗಿ**
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು.

**ಮಾನ್ಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೂಡ್ಲಿಗಿ**
**ಕ್ರಿ.ಎಮ್.ಸಿ. ಸಂಖ್ಯೆ: 1243/2023**

**ಇವರ ಮಧ್ಯ: ಶ್ರೀಮತಿ ಬಸಕ್ಕೆ ಮತ್ತು ಇತರರು ...ಅರ್ಜಿದಾರರು ಮತ್ತು ಮಾನ್ಯ ತಹಶೀಲ್ದಾರರು, ಜನನ ಮತ್ತು ಮರಣ ನೊಂದಣಾಧಿಕಾರಿ, ಕೂಡ್ಲಿಗಿ ... ಎದುರುದರರು**

**ಪ್ರಕಟಣೆ**

ಮೇಲ್ಕಾಣಿಸಿದ ಅರ್ಜಿದಾರರಾದ 1) ಬಸಕ್ಕ ಗಂಡ: ದಿ.ಮಲ್ಲಣ್ಣ, 2) ಜೆ. ನಾಗರಾಜ, 3) ಸಿದ್ಧಮ್ಮ, 4) ಚೆನ್ನಮ್ಮ, 5) ಜೆ. ಶರಣಪ್ಪ, ಈ ಅರ್ಜಿದಾರರು ರಾಮದುರ್ಗ ಗ್ರಾಮ ವಾಸಿಗಳಾಗಿದ್ದು, ಅರ್ಜಿದಾರರು ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಇದಕ್ಕೆ ಸಂಬಂಧಿಸಿದ್ದು, ಮರಣ ಹೊಂದಿದವರು ಶರಣಪ್ಪ ತಂದೆ ದಿ.ಲಿಂಗಪ್ಪ ಮರಣ ಹೊಂದಿದ ದಿನಾಂಕ: 08/02/1986 ರಂದು ರಾಮದುರ್ಗ ಗ್ರಾಮದಲ್ಲಿ ಮರಣ ಹೊಂದಿದ್ದು, ಮೊದಲನೇ ಅರ್ಜಿದಾರರಿಗೆ ಮಾವನಾಗಿರುತ್ತಾರೆ.. ಇನ್ನುಳಿದ ಅರ್ಜಿದಾರರಿಗೆ ಅಜ್ಜಯಾಗಿರುತ್ತಾರೆ. ಹಾಗಾಗಿ ಅರ್ಜಿದಾರರು ಇವರ ಮರಣ ದಿನಾಂಕವನ್ನು ನೋಂದಣಿ ಮಾಡಿಸಿಲ್ಲದ ಕಾರಣ ಸದರಿ ಬಸಮ್ಮ ಅವರ ಮರಣ ಪ್ರಮಾಣ ಪತ್ರವನ್ನು ನೀಡಲು ಎದುರುದಾರರಿಗೆ ಆದೇಶ ನೀಡಲು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿದ್ದು, ಸದರಿ ಅರ್ಜಿಯ ಸಂಖ್ಯೆ: ಕ್ರಿಮಿನಲ್ ಎಂ.ಸಿ. ನಂ.1243/2023 ಇರುತ್ತದೆ. ಸದರಿ ಅರ್ಜಿಯು ದಿನಾಂಕ: 04/1/2024 ರಂದು ಬೆಳ್ಳಿಗ್ಗೆ 11 ಗಂಟೆಗೆ ನಿಗಧಿಪಡಿಸಿದ್ದು, ಸದರಿ ಅರ್ಜಿಗೆ ಸಂಬಂಧಪಟ್ಟ ಯಾವುದೇ ತಂಟೆ ತಕರಾರು ಇದ್ದಲ್ಲಿ ಮೇಲ್ಕಾಣಿಸಿದ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮುಖಾಂತರ ಸಂಬಂಧಪಟ್ಟ ದಾಖಲೆಗಳೊಂದಿಗೆ, ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು ತಪ್ಪಿದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಇತ್ಯಾರ್ಥಗೊಳಿಸಲಾಗುವುದು. ಹೀಗೆಂದು ದಿನಾಂಕ: 16/11/2023 ಘನ ನ್ಯಾಯಾಲಯದ ಸಹಿ ಮೊಹರಿನೊಂದಿಗೆ ನೀಡಿರುತ್ತದೆ.

ಸ್ಥಳ: ಕೂಡ್ಲಿಗಿ
ದಿನಾಂಕ: 16/11/2023
**ಜೆ.ಎನ್. ಮಂಜುನಾಥ, ವಕೀಲರು, ಕೂಡ್ಲಿಗಿ**
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು.

**ಮಾನ್ಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೂಡ್ಲಿಗಿ**
**ಕ್ರಿ.ಎಮ್.ಸಿ. ಸಂಖ್ಯೆ: 1238/2023**

**ಇವರ ಮಧ್ಯ: ಶ್ರೀಮತಿ ಬಸಕ್ಕೆ ಮತ್ತು ಇತರರು ...ಅರ್ಜಿದಾರರು ಮತ್ತು ಮಾನ್ಯ ತಹಶೀಲ್ದಾರರು, ಜನನ ಮತ್ತು ಮರಣ ನೊಂದಣಾಧಿಕಾರಿ, ಕೂಡ್ಲಿಗಿ ... ಎದುರುದರರು**

**ಪ್ರಕಟಣೆ**

ಮೇಲ್ಕಾಣಿಸಿದ ಅರ್ಜಿದಾರರಾದ 1) ಬಸಕ್ಕ ಗಂಡ: ದಿ.ಮಲ್ಲಣ್ಣ, 2) ಜೆ. ನಾಗರಾಜ, 3) ಸಿದ್ಧಮ್ಮ, 4) ಚೆನ್ನಮ್ಮ, 5) ಜೆ. ಶರಣಪ್ಪ, ಈ ಅರ್ಜಿದಾರರು ರಾಮದುರ್ಗ ಗ್ರಾಮ ವಾಸಿಗಳಾಗಿದ್ದು, ಅರ್ಜಿದಾರರು ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಇದಕ್ಕೆ ಸಂಬಂಧಿಸಿದ್ದು, ಮರಣ ಹೊಂದಿದವರು ಬಸಮ್ಮ ಗಂಡ ದಿ.ಲಿಂಗಪ್ಪ ಮರಣ ಹೊಂದಿದ ದಿನಾಂಕ: 02/10/1972 ರಂದು ರಾಮದುರ್ಗ ಗ್ರಾಮದಲ್ಲಿ ಮರಣ ಹೊಂದಿದ್ದು, ಮೊದಲನೇ ಅರ್ಜಿದಾರರಿಗೆ ಅಜ್ಜಿಯಾಗಿದ್ದು. ಇನ್ನುಳಿದ ಅರ್ಜಿದಾರರಿಗೆ ಮುತ್ತಜ್ಜಿಯಾಗಿರುತ್ತಾರೆ. ಹಾಗಾಗಿ ಅರ್ಜಿದಾರರು ಇವರ ಮರಣ ದಿನಾಂಕವನ್ನು ನೋಂದಣಿ ಮಾಡಿಸಿಲ್ಲದ ಕಾರಣ ಸದರಿ ಬಸಮ್ಮ ಅವರ ಮರಣ ಪ್ರಮಾಣ ಪತ್ರವನ್ನು ನೀಡಲು ಎದುರುದಾರರಿಗೆ ಆದೇಶ ನೀಡಲು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿದ್ದು, ಸದರಿ ಅರ್ಜಿಯ ಸಂಖ್ಯೆ: ಕ್ರಿಮಿನಲ್ ಎಂ.ಸಿ. ನಂ.1238/2023 ಇರುತ್ತದೆ. ಸದರಿ ಅರ್ಜಿಯು ದಿನಾಂಕ: 06/1/2024 ರಂದು ಬೆಳ್ಳಿಗ್ಗೆ 11 ಗಂಟೆಗೆ ನಿಗಧಿಪಡಿಸಿದ್ದು, ಸದರಿ ಅರ್ಜಿಗೆ ಸಂಬಂಧಪಟ್ಟ ಯಾವುದೇ ತಂಟೆ ತಕರಾರು ಇದ್ದಲ್ಲಿ ಮೇಲ್ಕಾಣಿಸಿದ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮುಖಾಂತರ ಸಂಬಂಧಪಟ್ಟ ದಾಖಲೆಗಳೊಂದಿಗೆ, ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು ತಪ್ಪಿದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಇತ್ಯಾರ್ಥಗೊಳಿಸಲಾಗುವುದು.ಹೀಗೆಂದು ದಿನಾಂಕ: 16/11/2023 ಘನ ನ್ಯಾಯಾಲಯದ ಸಹಿ ಮೊಹರಿನೊಂದಿಗೆ ನೀಡಿರುತ್ತದೆ.

ಸ್ಥಳ: ಕೂಡ್ಲಿಗಿ
ದಿನಾಂಕ: 16/11/2023
**ಜೆ.ಎನ್. ಮಂಜುನಾಥ, ವಕೀಲರು, ಕೂಡ್ಲಿಗಿ**
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು.

**ಮಾನ್ಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೂಡ್ಲಿಗಿ**
**ಕ್ರಿ.ಎಮ್.ಸಿ. ಸಂಖ್ಯೆ: 1240/2023**

**ಇವರ ಮಧ್ಯ: ಶ್ರೀಮತಿ ಬಸಕ್ಕೆ ಮತ್ತು ಇತರರು ...ಅರ್ಜಿದಾರರು ಮತ್ತು ಮಾನ್ಯ ತಹಶೀಲ್ದಾರರು, ಜನನ ಮತ್ತು ಮರಣ ನೊಂದಣಾಧಿಕಾರಿ, ಕೂಡ್ಲಿಗಿ ... ಎದುರುದರರು**

**ಪ್ರಕಟಣೆ**

ಮೇಲ್ಕಾಣಿಸಿದ ಅರ್ಜಿದಾರರಾದ 1) ಬಸಕ್ಕ ಗಂಡ: ದಿ.ಮಲ್ಲಣ್ಣ, 2) ಜೆ. ನಾಗರಾಜ, 3) ಸಿದ್ಧಮ್ಮ, 4) ಚೆನ್ನಮ್ಮ, 5) ಜೆ. ಶರಣಪ್ಪ, ಈ ಅರ್ಜಿದಾರರು ರಾಮದುರ್ಗ ಗ್ರಾಮ ವಾಸಿಗಳಾಗಿದ್ದು, ಅರ್ಜಿದಾರರು ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಇದಕ್ಕೆ ಸಂಬಂಧಿಸಿದ್ದು, ಮರಣ ಹೊಂದಿದವರು ಪೋರಮ್ಮ ಗಂಡ ದಿ.ಶರಣಪ್ಪ ಮರಣ ಹೊಂದಿದ ದಿನಾಂಕ: 10/06/1972 ರಂದು ರಾಮದುರ್ಗ ಗ್ರಾಮದಲ್ಲಿ ಮರಣ ಹೊಂದಿದ್ದು, ಮೊದಲನೇ ಅರ್ಜಿದಾರರಿಗೆ ಅತ್ತೆಯಾಗಿರುತ್ತಾರೆ., ಇನ್ನುಳಿದ ಅರ್ಜಿದಾರರಿಗೆ ಅಜ್ಜಿಯಾಗಿರುತ್ತಾರೆ. ಹಾಗಾಗಿ ಅರ್ಜಿದಾರರು ಇವರ ಮರಣ ದಿನಾಂಕವನ್ನು ನೋಂದಣಿ ಮಾಡಿಸಿಲ್ಲದ ಕಾರಣ ಸದರಿ ಬಸಮ್ಮ ಅವರ ಮರಣ ಪ್ರಮಾಣ ಪತ್ರವನ್ನು ನೀಡಲು ಎದುರುದಾರರಿಗೆ ಆದೇಶ ನೀಡಲು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿದ್ದು, ಸದರಿ ಅರ್ಜಿಯ ಸಂಖ್ಯೆ: ಕ್ರಿಮಿನಲ್ ಎಂ.ಸಿ. ನಂ.1240/2023 ಇರುತ್ತದೆ. ಸದರಿ ಅರ್ಜಿಯು ದಿನಾಂಕ: 06/1/2024 ರಂದು ಬೆಳ್ಳಿಗ್ಗೆ 11 ಗಂಟೆಗೆ ನಿಗಧಿಪಡಿಸಿದ್ದು, ಸದರಿ ಅರ್ಜಿಗೆ ಸಂಬಂಧಪಟ್ಟ ಯಾವುದೇ ತಂಟೆ ತಕರಾರು ಇದ್ದಲ್ಲಿ ಮೇಲ್ಕಾಣಿಸಿದ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮುಖಾಂತರ ಸಂಬಂಧಪಟ್ಟ ದಾಖಲೆಗಳೊಂದಿಗೆ, ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು ತಪ್ಪಿದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಇತ್ಯಾರ್ಥಗೊಳಿಸಲಾಗುವುದು. ಹೀಗೆಂದು ದಿನಾಂಕ: 16/11/2023 ಘನ ನ್ಯಾಯಾಲಯದ ಸಹಿ ಮೊಹರಿನೊಂದಿಗೆ ನೀಡಿರುತ್ತದೆ.

ಸ್ಥಳ: ಕೂಡ್ಲಿಗಿ
ದಿನಾಂಕ: 16/11/2023
**ಜೆ.ಎನ್. ಮಂಜುನಾಥ, ವಕೀಲರು, ಕೂಡ್ಲಿಗಿ**
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು.

**ಮಾನ್ಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೂಡ್ಲಿಗಿ**
**ಕ್ರಿ.ಎಮ್.ಸಿ. ಸಂಖ್ಯೆ: 1239/2023**

**ಇವರ ಮಧ್ಯ: ಶ್ರೀಮತಿ ಬಸಕ್ಕೆ ಮತ್ತು ಇತರರು ...ಅರ್ಜಿದಾರರು ಮತ್ತು ಮಾನ್ಯ ತಹಶೀಲ್ದಾರರು, ಜನನ ಮತ್ತು ಮರಣ ನೊಂದಣಾಧಿಕಾರಿ, ಕೂಡ್ಲಿಗಿ ... ಎದುರುದರರು**

**ಪ್ರಕಟಣೆ**

ಮೇಲ್ಕಾಣಿಸಿದ ಅರ್ಜಿದಾರರಾದ 1) ಬಸಕ್ಕ ಗಂಡ: ದಿ.ಮಲ್ಲಣ್ಣ, 2) ಜೆ. ನಾಗರಾಜ, 3) ಸಿದ್ಧಮ್ಮ, 4) ಚೆನ್ನಮ್ಮ, 5) ಜೆ. ಶರಣಪ್ಪ, ಈ ಅರ್ಜಿದಾರರು ರಾಮದುರ್ಗ ಗ್ರಾಮ ವಾಸಿಗಳಾಗಿದ್ದು, ಅರ್ಜಿದಾರರು ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಇದಕ್ಕೆ ಸಂಬಂಧಿಸಿದ್ದು, ಮರಣ ಹೊಂದಿದವರು ಲಿಂಗಪ್ಪ ತಂದೆ ಬಿ.ನಿಂಗಪ್ಪ ಮರಣ ಹೊಂದಿದ ದಿನಾಂಕ: 09/08/1970 ರಂದು ರಾಮದುರ್ಗ ಗ್ರಾಮದಲ್ಲಿ ಮರಣ ಹೊಂದಿದ್ದು, ಮೊದಲನೇ ಅರ್ಜಿದಾರರಿಗೆ ಅಜ್ಜಯಾಗಿದ್ದು, ಇನ್ನುಳಿದ ಅರ್ಜಿದಾರರಿಗೆ ಮುತ್ತಜ್ಜಯಾಗಿರುತ್ತಾರೆ. ಹಾಗಾಗಿ ಅರ್ಜಿದಾರರು ಇವರ ಮರಣ ದಿನಾಂಕವನ್ನು ನೋಂದಣಿ ಮಾಡಿಸಿಲ್ಲದ ಕಾರಣ ಸದರಿ ಬಸಮ್ಮ ಅವರ ಮರಣ ಪ್ರಮಾಣ ಪತ್ರವನ್ನು ನೀಡಲು ಎದುರುದಾರರಿಗೆ ಆದೇಶ ನೀಡಲು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿದ್ದು, ಸದರಿ ಅರ್ಜಿಯ ಸಂಖ್ಯೆ: ಕ್ರಿಮಿನಲ್ ಎಂ.ಸಿ. ನಂ.1239/2023 ಇರುತ್ತದೆ. ಸದರಿ ಅರ್ಜಿಯು ದಿನಾಂಕ: 06/1/2024 ರಂದು ಬೆಳ್ಳಿಗ್ಗೆ 11 ಗಂಟೆಗೆ ನಿಗಧಿಪಡಿಸಿದ್ದು, ಸದರಿ ಅರ್ಜಿಗೆ ಸಂಬಂಧಪಟ್ಟ ಯಾವುದೇ ತಂಟೆ ತಕರಾರು ಇದ್ದಲ್ಲಿ ಮೇಲ್ಕಾಣಿಸಿದ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮುಖಾಂತರ ಸಂಬಂಧಪಟ್ಟ ದಾಖಲೆಗಳೊಂದಿಗೆ, ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು ತಪ್ಪಿದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಇತ್ಯಾರ್ಥಗೊಳಿಸಲಾಗುವುದು. ಹೀಗೆಂದು ದಿನಾಂಕ: 16/11/2023 ಘನ ನ್ಯಾಯಾಲಯದ ಸಹಿ ಮೊಹರಿನೊಂದಿಗೆ ನೀಡಿರುತ್ತದೆ.

ಸ್ಥಳ: ಕೂಡ್ಲಿಗಿ
ದಿನಾಂಕ: 16/11/2023
**ಜೆ.ಎನ್. ಮಂಜುನಾಥ, ವಕೀಲರು, ಕೂಡ್ಲಿಗಿ**
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು.

**ಮಾನ್ಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕೂಡ್ಲಿಗಿ**
**ಕ್ರಿ.ಎಮ್.ಸಿ. ಸಂಖ್ಯೆ: 1241/2023**

**ಇವರ ಮಧ್ಯ: ಶ್ರೀಮತಿ ಬಸಕ್ಕೆ ಮತ್ತು ಇತರರು ...ಅರ್ಜಿದಾರರು ಮತ್ತು ಮಾನ್ಯ ತಹಶೀಲ್ದಾರರು, ಜನನ ಮತ್ತು ಮರಣ ನೊಂದಣಾಧಿಕಾರಿ, ಕೂಡ್ಲಿಗಿ ... ಎದುರುದರರು**

**ಪ್ರಕಟಣೆ**

ಮೇಲ್ಕಾಣಿಸಿದ ಅರ್ಜಿದಾರರಾದ 1) ಬಸಕ್ಕ ಗಂಡ: ದಿ.ಮಲ್ಲಣ್ಣ, 2) ಜೆ.ನಾಗರಾಜ, 3) ಸಿದ್ಧಮ್ಮ, 4) ಚೆನ್ನಮ್ಮ, 5) ಜೆ. ಶರಣಪ್ಪ, ಈ ಅರ್ಜಿದಾರರು ರಾಮದುರ್ಗ ಗ್ರಾಮ ವಾಸಿಗಳಾಗಿದ್ದು, ಅರ್ಜಿದಾರರು ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಇದಕ್ಕೆ ಸಂಬಂಧಿಸಿದ್ದು, ಮರಣ ಹೊಂದಿದವರು ಮಲ್ಲಣ್ಣ ತಂದೆ ಲೇಟ್ ಲಿಂಗಪ್ಪ ಮರಣ ಹೊಂದಿದ ದಿನಾಂಕ: 05-10-1998 ರಂದು ರಾಮದುರ್ಗ ಗ್ರಾಮದಲ್ಲಿ ಮರಣ ಹೊಂದಿದ್ದು, ಮೊದಲನೇ ಅರ್ಜಿದಾರರಿಗೆ ಮಾವನಾಗಿರುತ್ತಾರೆ, ಇನ್ನುಳಿದ ಅರ್ಜಿದಾರರಿಗೆ ಅಜ್ಜಯಾಗಿರುತ್ತಾರೆ. ಹಾಗಾಗಿ ಅರ್ಜಿದಾರರು ಇವರ ಮರಣ ದಿನಾಂಕವನ್ನು ನೋಂದಣಿ ಮಾಡಿಸಿಲ್ಲದ ಕಾರಣ ಸದರಿ ಬಸಮ್ಮ ಅವರ ಮರಣ ಪ್ರಮಾಣ ಪತ್ರವನ್ನು ನೀಡಲು ಎದುರುದಾರರಿಗೆ ಆದೇಶ ನೀಡಲು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿದ್ದು, ಸದರಿ ಅರ್ಜಿಯ ಸಂಖ್ಯೆ: ಕ್ರಿಮಿನಲ್ ಎಂ.ಸಿ. ನಂ.1241/2023 ಇರುತ್ತದೆ. ಸದರಿ ಅರ್ಜಿಯು ದಿನಾಂಕ: 06/1/2024 ರಂದು ಬೆಳ್ಳಿಗ್ಗೆ 11 ಗಂಟೆಗೆ ನಿಗಧಿಪಡಿಸಿದ್ದು, ಸದರಿ ಅರ್ಜಿಗೆ ಸಂಬಂಧಪಟ್ಟ ಯಾವುದೇ ತಂಟೆ ತಕರಾರು ಇದ್ದಲ್ಲಿ ಮೇಲ್ಕಾಣಿಸಿದ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮುಖಾಂತರ ಸಂಬಂಧಪಟ್ಟ ದಾಖಲೆಗಳೊಂದಿಗೆ, ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು ತಪ್ಪಿದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಇತ್ಯಾರ್ಥಗೊಳಿಸಲಾಗುವುದು. ಹೀಗೆಂದು ದಿನಾಂಕ: 16/11/2023 ಘನ ನ್ಯಾಯಾಲಯದ ಸಹಿ ಮೊಹರಿನೊಂದಿಗೆ ನೀಡಿರುತ್ತದೆ.

ಸ್ಥಳ: ಕೂಡ್ಲಿಗಿ
ದಿನಾಂಕ: 16/11/2023
**ಜೆ.ಎನ್. ಮಂಜುನಾಥ, ವಕೀಲರು, ಕೂಡ್ಲಿಗಿ**
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು.






ಮೈಕ್ರೋ ನ್ಯೂಸ್

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ಮೈಲಾರ ಲಿಂಗೇಶ್ವರ ಸ್ವಾಮಿಗೆ ಹುಣ್ಣಿಮೆ ವಿಶೇಷ ಪೂಜೆ



**ಹೂವಿನಹಡಗಲಿ:** ಪ್ರಸಿದ್ಧ ಸುಕ್ಷೇತ್ರಗಳಲ್ಲಿ ಒಂದಾಗಿರುವ ಮೈಲಾರ ಲಿಂಗೇಶ್ವರ ದೇಗುಲಕ್ಕೆ ಹುಣ್ಣಿಮೆಯ ದಿನ ನಾಡಿನ ನಾನಾ ಕಡೆಗಳಿಂದ ಭಕ್ತ ಸಾಗರವೇ ಹರಿದು ಬಂದಿತ್ತು. ಸೋಮವಾರ ರಾತ್ರಿಯಿಂದಲೇ ಸಾವಿರಾರು ಭಕ್ತರ ದಂಡು ಸುಕ್ಷೇತ್ರಕ್ಕೆ ಆಗಮಿಸಿ ಮೈಲಾರಲಿಂಗೇಶ್ವರ ಸ್ವಾಮಿಯ ದರ್ಶನ ಪಡೆದರು. ಮಂಗಳವಾರ ಹುಣ್ಣಿಮೆ ನಿಮಿತ್ತ ಸ್ವಾಮಿಗೆ ವಿಶೇಷ ಪೂಜೆ, ಅಭಿಷೇಕ, ಅರ್ಚನೆ ಸೇರಿ ನಾನಾ ವಿಧದ ಭಂಡಾರ ಪೂಜೆಗಳನ್ನು ನೆರವೇರಿಸಲಾಯತು. ದೋಣಿಯಲ್ಲಿ ಬಾಳೆ ಹಣ್ಣು ತುಪ್ಪ ನೈವೇದ್ಯವನ್ನು ಕಟ್ಟಿಗೆ ದೋಣಿಗೆ ತುಂಬಿಸಿ ತಮ್ಮ ಭಕ್ತಿಯನ್ನ ಮೆರೆದರು. ದೇಗುಲದ ಆವರಣದಲ್ಲಿ ಕೆಲವರು ಗೊರವಪ್ಪನ ವೇಷ ಧರಿಸಿ, ಇನ್ನೂ ಕೆಲವರು ಚಾಟಿಯಿಂದ ಹೊಡೆದುಕೊಳ್ಳುತ್ತ ಸ್ವಾಮಿಗೆ ಹರಕೆ ತೀರಿಸಿದರು. ಈ ಸಂದರ್ಭ ಏಳು ಕೋಟಿ, ಏಳು ಕೋಟಿ ಏಳು ಕೋಟಿಗೋ ಎಂಬ ಭಕ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ನಾನ ಕಡೆಯಿಂದ ಆಗಮಿಸಿದ್ದ ಭಕ್ತರಿಗೆ ಪ್ರಸಾದದ ವ್ಯವಸ್ಥೆಯನ್ನೂ ಕಲ್ಪಿಸಲಾಗಿತ್ತು.

**ಸಾರಿಗೆ:** ಹುಣ್ಣಿಮೆ ನಿಮಿತ್ತ ಸುಕ್ಷೇತ್ರಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿರುವ ಹಿನ್ನೆಲೆ ಹೂವಿನಹಡಗಲಿ, ಹರಪನಹಳ್ಳಿ, ದಾವಣಗೆರೆ, ರಾಣೆಬೆನ್ನೂರು, ಹಾವೇರಿ ಸೇರಿ ನಾನಾ ಸಾರಿಗೆ ಘಟಕಗಳಿಂದ ವಿಶೇಷ ಬಸ್ ಸೌಲಭ್ಯವನ್ನೂ ಒದಗಿಸಲಾಗಿತ್ತು.

## ಅನ್ನದಾತರಿಗೆ ಅಪಮಾನ ಖಂಡನೆ

ಹೂವಿನಹಡಗಲಿ: ರಾಜ್ಯದ ರೈತರು ಬರಗಾಲದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರ ನೆರವಿಗೆ ಬರಬೇಕಾದ ರಾಜ್ಯ ಸರ್ಕಾರ ಸಕ್ಕರೆ ಸಚಿವ ಶಿವಾನಂದ ಪಾಟೀಲ ಅನ್ನದಾತರ ಬಗ್ಗೆ ಹಗುರವಾಗಿ ಮಾತನಾಡಿ ಅಪಮಾನ ಮಾಡಿರುವುದು ಖಂಡನೀಯ ಎಂದು ವಿಜಯನಗರ ಜಿಲ್ಲೆ ಬಿಜೆಪಿ ಪಕ್ಷದ ಪ್ರಧಾನ ಕಾರ್ಯ ದರ್ಶಿ ಎಂ.ಬಿ.ಬಸವರಾಜ ತೀವ್ರವಾಗಿ ಖಂಡಿಸಿದ್ದಾರೆ.

ಸಚಿವ ಶಿವಾನಂದ ಪಾಟೀಲರು ರೈತರ ಕ್ಷಮೆ ಕೇಳಬೇಕು ಹಾಗು ಕಾಂಗ್ರೆಸ್ ಪಕ್ಷವು ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕು ಎಂದು ಆಗ್ರಹಿದರು. ಉಚಿತ ಯೋಜನೆಗಳಿಗೆ ಸಾವಿರಾರು ಕೋಟಿ ಖರ್ಚು ಮಾಡುತ್ತಿದೆ ಆದರೆ ಇದುವರೆಗೂ ರೈತರಿಗೆ ಯಾವುದೇ ರೀತಿಯ ಕಿಂಚಿತ್ತೂ ಸಹಾಯ ಮಾಡಿಲ್ಲ. ರಾಜ್ಯದ ರೈತರ ನೆರವಿಗೆ ಬಂದು ರೈತರ ಸಾಲ ಮನ್ನಾ ಮಾಡಬೇಕೆಂದು ಹಾಗು ತಕ್ಷಣವೇ ರೈತರ ನೆರವಿಗೆ ಬರಬೇಕೆಂದು ಆಗ್ರಹಿಸತ್ತೇವೆ. ರೈತರನ್ನು ನಿರ್ಲಕ್ಷ್ಯ ಮಾಡಿದರೆ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ನಾಡಿನ ಜನತೆಗೆ ಸೋಲಿನ ರುಚಿ ತೋರಿಸುವುದರ ಮೂಲಕ ಸಿದ್ರಾಮಣ್ಣನ ಸರ್ಕಾರಕ್ಕೆ ತಕ್ಕ ಉತ್ತರ ಕೊಡುತ್ತಾರೆ ಕಾದು ನೋಡಿ ಎಂದು ಎಚ್ಚರಿಸಿದರು.

# ಟ್ರಾಫಿಕ್ ವಾರ್ಡನ್ ಪ್ರಾರಂಭ

### ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಹೇಳಿಕೆ

■ ಹಂಪಿ ಟೈಮ್ಸ್ ಬಳ್ಳಾರಿ

ನಗರದಲ್ಲಿಯ ರಸ್ತೆ ಸಂಚಾರದ ದಟ್ಟಣೆಯನ್ನು ಸುಧಾರಿಸಿ ಸುಗಮ ರಸ್ತೆ ಸಂಚಾರಕ್ಕೆ ಸಹಕಾರ ನೀಡಲು ಸಾರ್ವಜನಿಕರ ಪಾಲ್ಗೊಳ್ಳುವಿಕೆಯ 'ಟ್ರಾಫಿಕ್ ವಾರ್ಡನ್' ವ್ಯವಸ್ಥೆಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುತ್ತದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಅವರು ತಿಳಿಸಿದ್ದಾರೆ.



ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಸಭಾಂಗಣದಲ್ಲಿ ಮಂಗಳವಾರ ನಡೆದ ವಾಣಿಜ್ಯೋದ್ಯಮಿಗಳು, ಕೈಗಾರಿಕೋದ್ಯಮಿಗಳು ಮತ್ತು ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗಾಗಿ ನಡೆದ 'ರಸ್ತೆ ಸುಗಮ ಸಂಚಾರ'ದ ಸಮಾಲೋಚನಾ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಆಸಕ್ತ ಸಾರ್ವಜನಿಕರು, ನಿವೃತ್ತರು 'ಟ್ರಾಫಿಕ್ ವಾರ್ಡನ್'ಗಳಾಗಿ ನಿತ್ಯ 2 ತಾಸುಗಳು ಮಾತ್ರ ಕೆಲಸ ಮಾಡಲು ಅವಕಾಶವಿದ್ದು, ಆಸಕ್ತರಿಗೆ ಅಗತ್ಯ ತರಬೇತಿ ಮತ್ತು ಬೆಂಬಲವನ್ನು ಪೊಲೀಸ್ ಇಲಾಖೆ ನೀಡಲಿದೆ. ಮುಖ್ಯ ರಸ್ತೆಗಳಲ್ಲಿಯ ವ್ಯಾಪಾರಿಗಳು/ಉದ್ಯಮಿಗಳು ಒಟ್ಟಾಗಿ ಸೆಕ್ಯುರಿಟಿಗಾರ್ಡ್‌ಗಳನ್ನು ನೇಮಕ ಮಾಡಿಕೊಂಡು ಸಂಚಾರ ಮತ್ತು ವಾಹನಗಳ ಪಾರ್ಕಿಂಗ್ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮುಕ್ತ ಅವಕಾಶವಿದ್ದು, ಇಲಾಖೆ ಬೆಂಬಲ ನೀಡಲಿದೆ ಎಂದರು.

ಆಟೋ ಚಾಲಕರು ಪ್ರಯಾಣಿಕರು ಮತ್ತು ಸಾರ್ವಜನಿಕರ ಜೊತೆ ಉತ್ತಮವಾಗಿ ಮಾತನಾಡಲಿಕ್ಕಾಗಿ ಆಪ್ತಸಮಾಲೋಚನೆ ನಡೆಸಲಾಗುತ್ತಿದೆ. ಆಟೋ ಚಾಲಕರಿಗಾಗಿ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಲಾಗುತ್ತಿದೆ. ವಾಹನಗಳ 'ಯು'ಟರ್ನ್ ವ್ಯವಸ್ಥೆ, ಬೀದಿ ಬದಿ ವ್ಯಾಪಾರಿಗಳು ಮತ್ತು ಫುಟ್‌ಪಾತ್ ಆಕ್ರಮಣ, ಪಾದಾಚಾರಿಗಳು ಎದುರಿಸುತ್ತಿರುವ ಸಮಸ್ಯೆಗಳು ಎಲ್ಲವನ್ನೂ ಹಂತ ಹಂತವಾಗಿ ಪರಿಹರಿಸಲಾಗುತ್ತದೆ. ಸಾರ್ವಜನಿಕರ ಸಹಕಾರ – ಬೆಂಬಲ ಸಿಕ್ಕಾಗ ತ್ವರಿತವಾಗಿ ಸಂಚಾರ ಸಮಸ್ಯೆಗಳು ಪರಿಹಾರಗೊಳ್ಳುತ್ತವೆ. ಸಾರ್ವಜನಿಕರು 112 ಸಂಖ್ಯೆಗೆ ಯಾವುದೇ ಸಂದರ್ಭದಲ್ಲಿ ಕರೆ ಮಾಡಿದರೂ ಪೊಲೀಸ್ ಸಿಬ್ಬಂದಿ ಸ್ಥಳದಲ್ಲಿ ಹಾಜರಾಗುತ್ತದೆ. ಬದಲಾವಣೆ ಸಾರ್ವಜನಿಕರಿಂದಲೇ ಪ್ರಾರಂಭವಾಗಬೇಕು ಎಂದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಯಶವಂತರಾಜ್ ನಾಗಿರೆಡ್ಡಿ ಅವರು, ಬಳ್ಳಾರಿ ನಗರಾದ್ಯಂತ ಇರುವ ಸಂಚಾರಿ ದಟ್ಟಣೆ, ವಾಹನಗಳ ಹೆಚ್ಚಳ, ಇಕ್ಕಟ್ಟಾಗುತ್ತಿರುವ ರಸ್ತೆಗಳು, ರಸ್ತೆಗಳಲ್ಲಿಯ ಗುಂಡಿಗಳು, ಆಟೋ ನಿಲ್ದಾಣಗಳ ಪುರ?ರಚನೆ, ಬಡಾವಣೆಗಳಲ್ಲಿ ನಡೆಯುತ್ತಿರುವ ಕುಡಿತ, ಅನಧಿಕೃತ ಮಟನ್–ಚಿಕನ್ ಅಂಗಡಿಗಳ ಮೇಲೆ ನಿಯಂತ್ರಣ, ಬೀದಿ ನಾಯಿಗಳ ನಿಯಂತ್ರಣ ಇನ್ನಿತರೆ ವಿಷಯಗಳ ಕುರಿತು ಸಮಗ್ರವಾಗಿ ವಿಷಯವನ್ನು ಮಂಡನೆ ಮಾಡಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಬಿ. ಮಹಾರುದ್ರಗೌಡ ಅವರು, ಸ್ವಾಗತಿಸಿ, ಎಪಿಎಂಸಿ ಆವರಣದಲ್ಲಿ ಪೊಲೀಸ್ ಗಸ್ತು ಹೆಚ್ಚಿಸಿ ಕಳ್ಳತನಗಳನ್ನು – ಹಲ್ಲೆಗಳನ್ನು ನಿಯಂತ್ರಿಸಬೇಕು. ಅಲ್ಲದೇ, ವ್ಯಾಪಾರಿಗಳಿಗೆ ಭದ್ರತೆ ಒದಗಿಸಬೇಕು ಎಂದು ಮನವಿ ಮಾಡಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಮಾಜಿ ಅಧ್ಯಕ್ಷ ವಿ. ರವಿಕುಮಾರ್ ಆಟೋ ಚಾಲಕರಲ್ಲಿ ಶಿಸ್ತು ಮತ್ತು ಸಂಯವನ್ನು ಆಚರಣೆಗೆ ತರಬೇಕಿದೆ. ವಾಹನಗಳ ತಪಾಸಣೆಯ ನೆಪದಲ್ಲಿ ವಾಹನಗಳನ್ನು ರಸ್ತೆಗಳಲ್ಲಿ ಹೆಚ್ಚು ಸಮಯ ನಿಲ್ಲಿಸಿ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು, ಹೊರ ರಾಜ್ಯಗಳು – ಬೇರೆ ಜಿಲ್ಲೆಗಳ ವಾಹನಗಳ ನೋಂದಣಿ ಇದ್ದಲ್ಲಿ ಕುಟುಂಬದವರು ವಾಹನದಲ್ಲಿದ್ದರೂ ತಪಾಸಣೆಯ ನೆಪದಲ್ಲಿ ನೀಡುತ್ತಿರುವ ಕಿರುಕುಳಗಳ ಬಗ್ಗೆ ವಿವರಿಸಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವಾಧ್ಯಕ್ಷ ಸಿ. ಶ್ರೀನಿವಾಸರಾವ್ ಅವರು, ಸುಧಾಕ್ರಾಸ್ ಸಿಗ್ನಲ್‌ಲೈಟ್‌ಗಳ ಅವಧಿ, ವಾಹನಗಳ ದಟ್ಟಣೆ, ವಿಮ್ಸ್ ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳು ಇರುವ ಕಾರಣ ಸಂಚಾರ ನಿಯಂತ್ರಣಕ್ಕೆ ಆದ್ಯತೆ ನೀಡಬೇಕು ಎಂದರು ಕೋರಿದರು. ಜೆ. ರಾಜೇಶ್ ರೈಲ್ವೆ ನಿಲ್ದಾಣದಲ್ಲಿ ಪ್ರೀಪೇಯ್ಡ್ ಆಟೋ, ತೃತೀಯಲಿಂಗಿಗಳ ತೊಂದರೆ ಕುರಿತು, ಬಿ. ಸತ್ಯಬಾಬು ಕೆಐಎಡಿಬಿಯ 2ನೇ ಹಂತದಲ್ಲಿ ಭದ್ರತೆಯ ಜೊತೆ ರಸ್ತೆ, ಕುಡಿಯುವ ನೀರು, ಬೀದಿದೀಪಗಳನ್ನು ಅಳವಡಿಸಲು, ಸೊಂತಗಿರಿಧರ್ ಬೆಂಗಳೂರು ರಸ್ತೆಯ ಬಲಭಾಗದಲ್ಲಿ ಅಡ್ಡ ರಸ್ತೆಗಳಿದ್ದು ಈ ರಸ್ತೆಗಳಲ್ಲಿ ಏಕಮುಖ ಸಂಚಾರ, ರಾಘವೇಂದ್ರ ಕೊಲಾಚಲಂ ಕಾಂಪೌಂಡ್‌ನಲ್ಲಿ ಆಂಬುಲೆನ್ಸ್‌ಗಳ ಸಂಚಾರಕ್ಕೆ ಅಗತ್ಯ ಕ್ರಮಕೈಗೊಳ್ಳಬೇಕು. ಟಿ. ಶ್ರೀನಿವಾಸರಾವ್ ಕಾರ್‌ಪಾರ್ಕಿಂಗ್ ವ್ಯವಸ್ಥೆ ಕುರಿತು, ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಸಿ. ಸುರೇಶಬಾಬು ಎಪಿಎಂಸಿಯಲ್ಲಿ ಬಸ್ ನಿಲ್ದಾಣದಲ್ಲಿ ಬಸ್ ನಿಲ್ಲುತ್ತಿಲ್ಲ ಎಂದು ಸಮಸ್ಯೆಗಳನ್ನು ವಿವರಿಸಿದರು.

ಬಳ್ಳಾರಿ ಮಹಾನಗರ ಪಾಲಿಕೆಯ ಆಯುಕ್ತ ಖಲೀಲ್ ಸಾಬ್ ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ರಸ್ತೆಗಳಲ್ಲಿಯ ಗುಂಡಿಗಳನ್ನು ಮುಚ್ಚಲು ಟೆಂಡರ್ ಪ್ರಕ್ರಿಯೆ ಶೀಘ್ರದಲ್ಲಿಯೇ ಪೂರ್ಣಗೊಳ್ಳಲಿದೆ. ಕೆಐಎಡಿಬಿ ಪ್ರದೇಶಕ್ಕೆ ಕುಡಿಯುವ ನೀರು, ರಸ್ತೆ, ಬೀದಿ ದೀಪಗಳನ್ನು ಅಳವಡಿಸುವ ಕೆಲಸ ಹಂತ ಹಂತವಾಗಿ ಕೈಗೊಳ್ಳಲಾಗುತ್ತದೆ. ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಿಕ್ಕಾಗಿ ಸಾರ್ವಜನಿಕರ ಸಹಕಾರ ಅಗತ್ಯವಿದೆ ಎಂದರು.

ಸಂಚಾರ ಪೊಲೀಸ್ ಠಾಣೆಯ ಟ್ರಾಫಿಕ್ ಸಿಪಿಐ ಅಯ್ಯನಗೌಡ ಪಾಟೀಲ್ ಸಣ್ಣಮಾರುಕಟೆಯ ನೂತನ ಕಟ್ಟಡ ನಿರ್ಮಾಣ ಆರಂಭವಾಗುವವರೆಗೂ ಕಾರ್‌ಪಾರ್ಕಿಂಗ್ ವ್ಯವಸ್ಥೆ, ದೊಡ್ಡ ಮಾರುಕಟ್ಟೆಯ ನೆಲಮಳಿಗೆಯಲ್ಲಿ ಕಾರ್‌ಪಾರ್ಕಿಂಗ್ ವ್ಯವಸ್ಥೆ, ವ್ಯಾಪಾರಿಗಳು ಬೆಳಗ್ಗೆ 9 ಗಂಟೆಯ ಒಳಗಾಗಿ ರಾತ್ರಿ 9 ಗಂಟೆಯ ನಂತರ ಲೋಡಿಂಗ್ ಮತ್ತು ಅನ್‌ಲೋಡಿಂಗ್ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಸಿ. ಸುರೇಶಬಾಬು ವಂದನಾರ್ಪಣೆ ಸಲ್ಲಿಸಿದರು.

# ಬೋರವೆಲ್ ಸ್ಟಾರ್ಟ್ರ ಗೆ ಕಿಡಿಗೇಡಿಗಳಿಂದ ಬೆಂಕಿ

■ ಬಂದಾತರ ಪ್ರಕಾಶ್
ಹಂಪಿ ಟೈಮ್ಸ್ ಕೊಟ್ಟೂರು

ಪಟ್ಟಣದ ಜವಳೇರ ಕಣದ ಉದ್ಯಾನವನದಲ್ಲಿನ ಬೋರವೆಲ್ ವಿದ್ಯುತ್ ಚಾಲಿತ ಸ್ಟಾರ್ಟ್ರ ಗೆ ಅವಿವೇಕಿಗಳು ಬೆಂಕಿ ಹಚ್ಚಿ ತಮ್ಮ ವಿಕೃತ ಮನಸ್ಸಿನ, ಕ್ರೌರ್ಯತೆಯನ್ನು ತೋರ್ಪಡಿಸಿದ್ದಾರೆ, ಶೀಘ್ರ ಪೋಲಿಸ್ ಇಲಾಖೆ, ಕೃತ್ಯ



ಎಸಗಿದವರನ್ನು ಪತ್ತೆ ಹಚ್ಚಿ, ವಿಕೃತ ಮನಸ್ಸುಗಳಿಗೆ ಬ್ರೇಕ್ ಹಾಕುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ. ಪಟ್ಟಣದಲ್ಲಿನ ಉದ್ಯಾನವನಗಳ ಅಭಿವೃದ್ಧಿಗೆ, ಪ.ಪಂ ಮುಖ್ಯಾಧಿಕಾರಿ ಎ.ನಸರುಲ್ಲಾ ಅವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಉದ್ಯಾನವನಕ್ಕೆ , ತಡೆಗೋಡೆ ನಿರ್ಮಿಸಿ, ಬೋರವೆಲ್ ಹಾಕಿ, ಪಂಪು, ಸ್ಟಾರ್ಟ್ರ ಅಳವಡಿಸಿ ಉದ್ಯಾನವನದ ಅಭಿವೃದ್ಧಿಗೆ ಮುಂದಾಗಿದ್ದಾರೆ. ಹಸಿರು ಹೊನಲು ತಂಡದ ಯುವಕರು ಅಧಿಕಾರಿಗಳ ಅಭಿವೃದ್ಧಿ ಕಾರ್ಯಕ್ಕೆ ಕೈ ಜೋಡಿಸಿದ್ದಾರೆ. ಜವಳೇರ ಕಣದ ಉದ್ಯಾನವನದಲ್ಲಿ ಕೂಡಾ ಇತ್ತೀಚಿಗೆ ಸುಮಾರು 40 ಗಿಡಗಳನ್ನು ನೆಟ್ಟು, ನೀರುಣಿಸುವ ಮೂಲಕ ಪೋಷಿಸುತ್ತಿದ್ದಾರೆ.

ಈ ಅಭಿವೃದ್ಧಿಯನ್ನು ಸಹಿಸದ ಕೆಲ ವಿಕೃತ ಮನಸಿನವರ ಕಿಡಿಗೇಡಿಗಳು ಬೋರವೆಲ್ ಸ್ಟಾರ್ಟ್ರ ಗೆ ಬೆಂಕಿ ಹಚ್ಚಿ ಬೋರ್ಡ್ ಮತ್ತು ಸ್ಟಾರ್ಟ್ರ ನ್ನು ಸಂಪೂರ್ಣ ಸುಟ್ಟು ಹಾಕಿದ್ದಾರೆ, ಹಸಿರು ಹೊನಲು ತಂಡದ ಸದಸ್ಯರೋರ್ವರು ಈ ಕೃತ್ಯದ ಶೇಷವನ್ನು ವೀಡಿಯೋ ಮೂಲಕ ಸಮಾಜಿಕ ಜಾಲತಾಣದಲ್ಲಿ ಬಿತ್ತರಿಸಿ, ಪರಿಸರದ ಅಭಿವೃದ್ಧಿಗೆ ಕೈ ಜೋಡಿಸದಿದ್ದರು ಚಿಂತೆಯಿಲ್ಲ, ಈ ರೀತಿಯ ವಿಕೃತಿಗೆ ಕೈಯಾಕದಿರಿ ಎಂದು ದುಃಖದಿಂದ ಮನವಿ ಮಾಡಿಕೊಂಡಿದ್ದಾರೆ.

ಇದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಿದ ಪ್ರಜ್ಞಾವಂತ ನಾಗರಿಕರು, ಪ ಪಂ ನೊಂದಿಗೆ ಕೈ ಜೋಡಿಸಿದ "ಹಸಿರು ಹೊನಲು ತಂಡ" ಹಾಗೂ ವಿವಿಧ ಸಂಘಟನೆಗಳು ಕೊಟ್ಟೂರು ಪಟ್ಟಣವನ್ನು ಹಸಿರು ಪಟ್ಟಣವಾಗಿ ನಿರ್ಮಿಸಲು ಸದಾ ಶ್ರಮಿಸುತ್ತಿವೆ ಈ ರೀತಿಯ ಶ್ರಮಕ್ಕೆ, ಕ್ಕಿಮ್ಮತ್ತಿಲ್ಲದಂತೆ ಮಾಡಲು, ಕೆಲ ನೀಚರು, ಹೀನ ಕೃತ್ಯಕ್ಕೆ ಮುಂದಾಗಿದ್ದಾರೆ ಇಂತವರನ್ನು ಪೋಲಿಸ್ ಇಲಾಖೆ ಶೀಘ್ರ ಪತ್ತೆ ಹಚ್ಚಿ ಸೂಕ್ತ ಕ್ರಮ ಕೈಗೊಳ್ಳವಂತೆ ಆಗ್ರಹಿಸಿದ್ದಾರೆ.

---

**ಕೆಲ ಕಿಡಿಗೇಡಿಗಳು,ಉದ್ಯಾನವನದಲ್ಲಿನ ಬೋರವೆಲ್ ಸ್ಟಾರ್ಟ್ರ ಗೆ ಬೆಂಕಿ ಹಚ್ಚಿ ಹಾನಿ ಮಾಡಿದ್ದಾರೆ, ಶೀಘ್ರ ಈ ಬಗ್ಗೆ ಪರಿಶೀಲನೆಗೆ ಮುಂದಾಗುವೆವು.**
**– ಎ.ನಸರುಲ್ಲಾ. ಪ.ಪಂ. ಮುಖ್ಯಾಧಿಕಾರಿ,ಕೊಟ್ಟೂರು.**

---

**ಜವಳೇರ ಕಣದ ಪಾರ್ಕ್ ನಲ್ಲಿ ಗೋಣಿಚೀಲದ ತುಂಡುಗಳನ್ನು ಸ್ಟಾರ್ಟ್ರ ಒಳಗೆ ನೂಕಿ ಅವಿವೇಕಿಗಳು ಬೆಂಕಿ ಹಚ್ಚಿರುವಂತದ್ದು ಹಾಗೆ ಸ್ಟಾರ್ಟ್ರ ಕೆಳಗೆ ವಿದ್ಯುತ್ ಪ್ರವಾಹದ ವೈರನ್ನು ಕಟ್ ಮಾಡಿ. ಕೃತ್ಯಕ್ಕೆ ಮುಂದಾಗಿರುವಂತದ್ದು ಸ್ಥಳದಲ್ಲಿ ಗೋಚರಿಸುತ್ತಿದೆ.**
**– ಹಸಿರು ಹೊನಲು ತಂಡದ, ಸದಸ್ಯರು. ಕೊಟ್ಟೂರು.**

# ಬಯಲಾಟ ಪ್ರದರ್ಶನ



■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಮೊಬೈಲ್‌ಗಳ ಗೀಳು ಸಿನಿಮಾ ಹಾಗೂ ಧಾರವಾಹಿಗಳ ಆರ್ಭಟಗಳ ಮುಂದೆ ಗಂಡು ಮೆಟ್ಟಿನ ಕಲೆ ಬಯಲಾಟ ಪ್ರದರ್ಶನ ಕಣ್ಮರೆಯಾಗುತ್ತಿದೆ ಎಂದು ದೇವಗಿರಿಯ ಸರ್ಕಾರಿ ಪ.ಪೂ.ಕಾಲೇಜ್‌ನ ಪ್ರಾಂಶುಪಾಲರಾದ ಜಿ.ಪಿ.ಪೂಜಾರ್ ಬೇಸರ ವ್ಯಕ್ತಪಡಿಸಿದರು.

ತಾಲೂಕಿನ ತಂಬ್ರಹಳ್ಳಿಯಲ್ಲಿ ನಡೆದ ಕರ್ನಾಟಕ ನಾಮಕರಣ 50ನೇ ವರ್ಷದ ಸಂಭ್ರಮೋತ್ಸವ ನಿಮ್ಮಿತ್ತ ಏಕೀಕರಣ ಟ್ರಸ್ಟ್ ಹಾಗೂ ತಂಬ್ರಹಳ್ಳಿ ಬಯಲ ಬೆಳಗು ಬಯಲಾಟ ಪ್ರಯೋಗಿಕ ಅಧ್ಯಯನ ಕೇಂದ್ರ ಇವರ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಇಂದಿನ ದಿನಗಳಲ್ಲಿ ಬಯಲಾಟ ಕಲೆ ಕುರಿತು ಉಪನ್ಯಾಸದಲ್ಲಿ ಮದ್ದಳೆ ಬಾರಿಸುವ ಮೂಲಕ ಉದ್ಘಾಟಿಸಿ ಬಳಿಕ ಅವರು ಮಾತನಾಡಿದರು. ಮೊದಲು ನಡೆಯುತ್ತಿದ್ದ ಬಯಲಾಟ ಇಡೀ ರಾತ್ರಿ ಪ್ರದರ್ಶನ ಬದಲಾಗಿ ಹೊಸ ಆಯಾಮಗಳನ್ನು ಅಳವಡಿಸಿಕೊಳ್ಳುವ ಮೂಲಕ ನಿಗಧಿತ ಸಮಯದಲ್ಲಿ ಉತ್ತಮ ಪ್ರದರ್ಶನ ನೀಡುವ ಹಂಬಲದ ಹಿನ್ನೆಲೆಯಲ್ಲಿ ಬಯಲಾಟ ಪುನಶ್ಚೇತಗೊಳಿಸಲು ರಾಜ್ಯಾಧ್ಯಂತ ಕೈಗೊಂಡ ಡಾ.ಅಕ್ಕಿ ಸುಜಾತ ಶ್ರಮಕ್ಕೆ ನಾವೆಲ್ಲ ಪ್ರೋತ್ಸಹ ನೀಡಬೇಕಾಗಿದೆ ಎಂದರು.

ಹಿರಿಯ ಸಾಹಿತಿ ಬಿ.ಜಿ.ಹಳ್ಳಿ ಹುರುಕಡ್ಲಿ ಶಿವಕುಮಾರ್ ಮಾತನಾಡಿ, ಬಯಲಾಟ ಪ್ರದರ್ಶನವನ್ನು ಕಲೆ ಎನ್ನುವುದಾದರೆ ಸರ್ಕಾರದಿಂದ ನಿರ್ಲಕ್ಷ್ಯಕ್ಕೊಳಾಗಿದೆ. ಇದನ್ನು ಸಾಮೂಹಿಕ ಸಂಘಟನೆಗಳು, ಅನೇಕ ಸಂಸ್ಥೆಗಳು ಪ್ರೋತ್ಸಹಿಸಿ ಬೆಳೆಸಬೇಕಿದೆ ಎಂದರು.

ಟ್ರಸ್ಟ್‌ನ ಅಧ್ಯಕ್ಷೆ ಡಾ.ಸುಜಾತ ಅಧ್ಯಕ್ಷತೆವಹಿಸಿ, ತಂಬ್ರಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿನ ಬಯಲಾಟವಾಡುವ ವ್ಯಕ್ತಿಗಳ ಕುರಿತು ಬರೆಯಲಾಗಿದ್ದ ಪುಸ್ತಕಕ್ಕೆ ನನಗೆ ರಾಜ್ಯ ಅಕಾಡೆಮಿ ಪ್ರಶಸ್ತಿ ಬಂದಿತು. ಕಲೆಗಳ ತವರುರಾಗಿರುವ ತಂಬ್ರಹಳ್ಳಿ ವ್ಯಾಪ್ತಿಯಲ್ಲಿ ಬಯಲಾಟಕ್ಕೆ ಪ್ರಾಮುಖ್ಯತೆ ನೀಡಲಾಗಿದೆ. ಈ ಕಲೆಯನ್ನು ಸಮಕಾಲಿನಗೊಳ್ಳುವ ಮತ್ತು ಅಧ್ಯಯನ ಶಿಸ್ತಿಗೆ ಒಳಪಡಿಸುವ ಹಿನ್ನೆಲೆಯಲ್ಲಿ ಟ್ರಸ್ಟ್‌ನಿಂದ ಇಂತಹ ಕಾರ್ಯಕ್ರಮಗಳನ್ನು ಏರ್ಪಡಿಲಾಗುತ್ತಿದೆ ಎಂದರು.

ಸಂಜೆ ನಡೆದ ಈ ಕಾರ್ಯಕ್ರಮದಲ್ಲಿ ಸ್ತ್ರೀ ಮತ್ತು ಪುರುಷ ಕುಣಿತ ಸ್ಪರ್ಧೆಯಲ್ಲಿ 14ಜನ ಕಲಾವಿದರು ಪಾಲ್ಗೊಂಡಿದ್ದರು. ಇದರಲ್ಲಿ ಸ್ತ್ರೀ ಪಾತ್ರದರಿಯಗಿ ಸ್ಪರ್ಧಿಸಿದ್ದ ಶೀಗೇನಹಳ್ಳಿ ನೂರ್‌ಸಾಬ್ ಪ್ರಥಮ, ಗುಡ್ಲಾನೂರು ವಸಂತ ದ್ವಿತೀಯ ಹಾಗೂ ಗಡಿಹಳ್ಳಿ ನಿಂಗಪ್ಪ ತೃತೀಯ ಸ್ಥಾನ ಪಡೆದರು. ಪುರುಷ ಕುಣಿತ ಸ್ಪರ್ಧೆಯಲ್ಲಿ ಶೀಗೇನಹಳ್ಳಿ ರಾಜಾಸಾಬ್ ಪ್ರಥಮ, ಕಡ್ಲಬಾಳು ಬ್ಯಾಟಿ ಲಕ್ಷ್ಮಪ್ಪ ದ್ವಿತೀಯ ಮತ್ತು ಚಿಲುಗೋಡಿನ ನಂದಿಬಂಡಿ ಕರಿಯಪ್ಪ ತೃತೀಯ ಸ್ಥಾನಗಳನ್ನು ಪಡೆದುಕೊಂಡರು. ವಿಜೇತರಿಗೆ ಅಕ್ಕಿ ಬಸಣ್ಣಿ, ಜೆಂಗಸನಹಳ್ಳಿ ದಿಂಡಿಬಸಪ್ಪ, ಹಾಘೂ ಪಟ್ಟಣಶೆಟ್ಟಿ ಭರಮಜ್ಜ ಇವರ ಹೆಸರಿನಲ್ಲಿ ಪ್ರಶಸ್ತಿಯ ಜೊತೆಗೆ ನಗದು ಬಹುಮಾನ ವಿತರಿಸಲಾಯಿತು. ಇದರೊಂದಿಗೆ ಈ ಭಾಗದ ಹಿರಿಯ 31 ಕಲಾವಿದರಿಗೆ ಸನ್ಮಾನಿಸಲಾಯಿತು.

# ವಿಕಲಚೇತನರ ಶ್ರೇಯೋಭಿವೃದ್ಧಿಗೆ ಬದ್ಧ

### ಶಾಸಕ ಕೃಷ್ಣ ನಾಯ್ಕ್ ಹೇಳಿಕೆ । ವಿಶ್ವ ವಿಕಲಚೇತನರ ದಿನಾಚರಣೆ, ಜಾಗೃತಿ ಕಾರ್ಯಕ್ರಮ

■ ಹಂಪಿ ಟೈಮ್ಸ್ ಹೂವಿನಹಡಗಲಿ

ವಿಕಲಚೇತನರಿಗೆ ಸರ್ಕಾರದಿಂದ ಬರುವಂತಹ ಯೋಜನೆ ಅನುದಾನ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಿ ವಿಕಲಚೇತನರ ಶ್ರೇಯೋಭಿವೃದ್ಧಿಗೆ ಶ್ರಮಿಸುವೆ ಎಂದು ಶಾಸಕ ಕೃಷ್ಣ ನಾಯ್ಕ್ ಹೇಳಿದರು.

ಪಟ್ಟಣದ ರಂಗಭಾರತಿ ರಂಗಮಂದಿರದಲ್ಲಿ ಜಿಲ್ಲಾ ಮತ್ತು ತಾಲೂಕ್ ಆಡಳಿತ ಹಾಗೂ ತಾಲೂಕು ಪಂಚಾಯಿತಿ ತಾಲೂಕು ಅಂಗವಿಕಲರ ಮತ್ತು ಪಾಲಕರ ಒಕ್ಕೂಟ ನಗರ ಘಟಕ ಹಡಗಲಿ, ಗ್ರಾಮ ಪಂಚಾಯಿತಿ ಮಟ್ಟದ ಹಾಗೂ ಎಂ ಆರ್ ಡಬ್ಲ್ಯೂ, ಯು ಆರ್ ಡಬ್ಲ್ಯೂ, ವಿ ಆರ್‌ಡಬ್ಲ್ಯೂ ಒಕ್ಕೂಟಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ವಿಕಲಚೇತನರ ದಿನಾಚರಣೆ ಹಾಗೂ ಜಾಗೃತಿ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು.



ವಿಕಲಚೇತನರು ಧೈರ್ಯ ಧೃತಿಗೆಡಬಾರದು ಸರ್ಕಾರ ನಿಮ್ಮ ಶ್ರೇಯೋಭಿವೃದ್ಧಿಗೆ ಅನೇಕ ಯೋಜನೆ ಜಾರಿಗೆ ತಂದಿದೆ ನಿಮಗೆ ಸಿಗುವಂತಹ ಯೋಜನೆ ಅನುದಾನ ಸೌಲಭ್ಯಗಳನ್ನು ಸಮರ್ಪಕವಾಗಿ ತಲುಪಿಸುವ ಕೆಲಸ ಮಾಡುತ್ತೇನೆ ಅವುಗಳನ್ನು ತಾವು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗಿ ಬದುಕನ್ನು ರೂಪಿಸಿಕೊಳ್ಳಿ ನಿಮ್ಮ ಶ್ರೇಯೋಬಿ ವೃದ್ದಿಗೆ ನಿಮ್ಮ ಕಲ್ಯಾಣಭಿವೃದ್ಧಿಗೆ ನಾನು ಸದಾ ಬದ್ಧನಿದ್ದೇನೆ ಎಂದರು. ಮಾಶಾಸನ ಹೆಚ್ಚಿಸಲು ಸರ್ಕಾರಕ್ಕೆ ಮನವಿ ಮಾಡುತ್ತೇನೆ ಎಂದರು. ಪರಿವರ್ತನ ಬುದ್ದಿಮಾಂದ್ಯ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀಮತಿ ಸುಮಾ ವಿಜಯ್ ಮಾತನಾಡಿ, ಎಂ ಆರ್ ಡಬ್ಲ್ಯೂ ವಿ ಆರ್ ಡಬ್ಲ್ಯೂ ಅವರು ಕಡಿಮೆ ವೇತನದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ವೇತನ ಹೆಚ್ಚಿಸಲು ಮತ್ತು ವಿಕಲಚೇತನರ ಬಹು ವರ್ಷಗಳ ಬೇಡಿಕೆಯಾದ ವಿಕಲಚೇತನರ ಭವನ ನಿರ್ಮಿಸಿ ಕೊಡಿ ಎಂದು ಶಾಸಕರಲ್ಲಿ ಮನವಿ ಮಾಡಿದರು. ಒಕ್ಕೂಟದ ಸೋಮಣ್ಣ ಪ್ರಾಸ್ತಾವಿಕ ನುಡಿ ಮಾತನಾಡಿ, ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಎಲ್ಲಾ ಅಂಗವಿಕಲರು ಒಗ್ಗಟ್ಟಾಗಬೇಕು ಯುಡಿಐಡಿ ಕಾರ್ಡ್ ಮಾಡಿಸದವರು ಕೂಡಲೇ ಸಂಬಂಧಪಟ್ಟ ವಿ ಆರ್ ಡಬ್ಲ್ಯೂ ಎಂ ಆರ್ ಡಬ್ಲ್ಯೂ ಅವರನ್ನು ಸಂಪರ್ಕಿಸಿ ಕಾರ್ಡುಗಳನ್ನು ಪಡೆದುಕೊಳ್ಳಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಿಕಲಚೇತನರನ್ನು ಗೌರವಿಸಿ ಸನ್ಮಾನಿಸಲಾಯಿತು. ಕುಮಾರಿ ಪಾರಿ ಕಾವ್ಯ ಅವರಿಗೆ "ಹಡಗಲಿ ಕೋಗಿಲೆ" ಬಿರುದು ನೀಡಿ ಗೌರವಿಸಲಾಯಿತು. ಜಿ ಕನ್ನಡ ಟಿವಿಯ ಕಲಾವಿದರಾದ ಮೆಹಬೂಬ್ ಸಾಬು ಧಾರವಾಡ ಶ್ರೀ ತಿಮ್ಮಣ್ಣ ಭಕ್ತಿ ಗೀತೆ ಹಾಡಿದರು. ಶ್ರೀ ಪುಟ್ಟರಾಜು ಗವಾಯಿಗಳ ಭಾವಚಿತ್ರವನ್ನು ಆಂಜನೇಯ ದೇವಸ್ಥಾನದಿಂದ ರಂಗಭಾರತಿ ರಂಗಮಂದಿರ ತನಕ ಡ್ರಮ್ ಸೆಟ್ ವಾದ್ಯ ಮೇಳಗಳೊಂದಿಗೆ ಮೆರವಣಿಗೆ ಮಾಡಿಕೊಂಡು ಬರಲಾಯಿತು. ಅಂಗವಿಕಲರ ಮತ್ತು ಪಾಲಕ ಒಕ್ಕೂಟದ ತಾಲೂಕ ಅಧ್ಯಕ್ಷ ಎಸ್ ಚಂದ್ರಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಧಿಕಾರಿ ಶ್ರೀ ಕೃಷ್ಣ ಸಾ ಲಕ್ಷ್ಮಣ ಸಾ ಬಾಕಳೆ, ಪುರಸಭೆ ಮುಖ್ಯಧಿಕಾರಿ ಶ್ರೀ ಪಚ್ಚಿ ಮಲ್ಲೇಶ್, ತಾಲೂಕು ಸರ್ಕಾರಿ ನೌಕರ ಸಂಘದ ಅಧ್ಯಕ್ಷರಾದ ಎಂಪಿಎಂ ಅಶೋಕ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀ ಬಿ. ರಾಮನಗೌಡ, ನಗರ ಘಟಕದ ಅಧ್ಯಕ್ಷರಾದ ಎನ್‌ಎಂ ಕೊಟ್ರೇಶ್, ತಾಲೂಕು ಕಾರ್ಯದರ್ಶಿ ಕೊಟ್ರೇಶ್ ಕೊಡಬಾಳ ಹೊಳಲು, ಎಂ ಆರ್ ಡಬ್ಲ್ಯೂ ವಿ ಆರ್ ಡಬ್ಲ್ಯೂ ಗಳು ಸೇರಿದಂತೆ ವಿಕಲಚೇತನರ ಪಾಲಕ ಪೋಷಕರು ಇದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA